# ಸಮಗ್ರ ಚೌಕಟ್ಟು ಮತ್ತು ಪುನಃಶ್ಚೈತನ್ಯಕಾರಿ ಅಭ್ಯಾಸಗಳ ಮೂಲಕ ಕರ್ನಾಟಕದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಸಾಂಸ್ಥೀಕರಣಗೊಳಿಸುವುದು

ಜನವರಿ 2026



ಮಕ್ಕಳೊಂದಿಗೆ ನಡೆಯುತ್ತಿರುವ ಪುನಃಶ್ಚೈತನ್ಯಕಾರಿ ವೃತ್ತದ ಚಿತ್ರ

unicef for every child

enfold

The Metropolitan Institute

# ಸಮಗ್ರ ಚೌಕಟ್ಟು ಮತ್ತು ಪುನಃಶ್ಚೈತನ್ಯಕಾರಿ ಅಭ್ಯಾಸಗಳ ಮೂಲಕ ಕರ್ನಾಟಕದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಸಾಂಸ್ಥೀಕರಣಗೊಳಿಸುವುದು

ಜನವರಿ 2026


**ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್ ವತಿಯಿಂದ**

enfold

ಬೆಂಬಲದೊಂದಿಗೆ

unicef
for every child

ಸಹಯೋಗದೊಂದಿಗೆ

The Metropolitan Institute

© ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್ (Enfold Proactive Health Trust) 2026

**ಹಕ್ಕುಸ್ವಾಮ್ಯ:** ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ. ಈ ವರದಿಯಲ್ಲಿ ವ್ಯಕ್ತಪಡಿಸಲಾದ ವಿಷಯಗಳು, ವಿಶ್ಲೇಷಣೆ, ಅಭಿಪ್ರಾಯಗಳು ಮತ್ತು ಶಿಫಾರಸುಗಳು ಕೇವಲ ಲೇಖಕರ, ಸಂಸ್ಥೆಯ ಅಭಿಪ್ರಾಯಗಳಾಗಿವೆ ಮತ್ತು ಅವು UNICEFನ ಅಭಿಪ್ರಾಯಗಳನ್ನು ಪ್ರತಿನಿಧಿಸುವುದಿಲ್ಲ. ಎನ್‌ಫೋಲ್ಡ್ ಮತ್ತು ದಿ ಮೆಟ್ರೋಪಾಲಿಟನ್ ಇನ್‌ಸ್ಟಿಟ್ಯೂಟ್‌ಗೆ ಸೂಕ್ತ ಸ್ವೀಕೃತಿಯೊಂದಿಗೆ ಈ ದಾಖಲೆಯನ್ನು ಭಾಗಶಃ ಅಥವಾ ಪೂರ್ಣವಾಗಿ ಉಲ್ಲೇಖಿಸಬಹುದು, ಪುನರುತ್ಪಾದಿಸಬಹುದು ಅಥವಾ ಅನುವಾದಿಸಬಹುದು.
ಈ ವರದಿಯಿಂದ ಅಥವಾ ವರದಿಯ ಯಾವುದೇ ಇತರ ಮಾಹಿತಿಯ ಬಳಕೆಯಿಂದ ಉಂಟಾಗುವ ಪರಿಣಾಮಗಳಿಗೆ UNICEF ಯಾವುದೇ ರೀತಿಯಲ್ಲಿ ಜವಾಬ್ದಾರರಾಗಿರುವುದಿಲ್ಲ. ಈ ವರದಿಯು ಸಾರ್ವಜನಿಕರಿಗೆ ಮಾಹಿತಿ ಮತ್ತು ಶಿಕ್ಷಣ ನೀಡಲು ಬರೆಯಲ್ಪಟ್ಟಿದೆ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ಮಾರಾಟ ಮಾಡುವುದು ಮತ್ತು ಬಳಸುವುದು ನಿಷಿದ್ಧ

**ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್**
ಸಂಖ್ಯೆ 42, 3ನೇ ಮುಖ್ಯರಸ್ತೆ,
1ನೇ ಅಡ್ಡರಸ್ತೆ, ದೊಮ್ಮಲೂರು 2ನೇ ಹಂತ,
ಬೆಂಗಳೂರು - 560071, ಭಾರತ.

+91 99000 94251

info@enfoldindia.org

**ಉಲ್ಲೇಖ (Cite as):** *ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್, ಆಂಧ್ರಪ್ರದೇಶದ ಶಾಲೆಗಳಲ್ಲಿ ಸಮಗ್ರ ಚೌಕಟ್ಟು ಮತ್ತು ಪುನಃಚೈತನ್ಯಕಾರಿ ಅಭ್ಯಾಸಗಳ ಮೂಲಕ ವಿದ್ಯಾರ್ಥಿಗಳ ಯೋಗಕ್ಷೇಮವನ್ನು ಸಾಂಸ್ಥಿಕಗೊಳಿಸುವುದು (2026).*

# ಪರಿವಿಡಿ


ಕೃತಜ್ಞತೆಗಳು 4

ಪ್ರಮುಖ ಪದಗಳ ಪದಕೋಶ 6

**ಕಾರ್ಯನಿರ್ವಾಹಕ ಸಾರಾಂಶ 7**

**ಪೀಠಿಕೆ 9**

**ಸಂಶೋಧನಾ ವಿಧಾನ 11**

**ಹಿನ್ನೆಲೆ 12**

**ಶಿಫಾರಸುಗಳು 17**

**ಅನುಬಂಧ ಎ:** ಸಂವಿಧಾನಾತ್ಮಕ ಮತ್ತು ಕಾನೂನು ಚೌಕಟ್ಟು (ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ನೀತಿಗಳು) 21

**ಅನುಬಂಧ ಬಿ:** ಪ್ರಮುಖ ಮಾಹಿತಿದಾರರಿಂದ ಪಡೆದ ಒಳನೋಟಗಳು 28

**ಅನುಬಂಧ ಸಿ:** ಪಠ್ಯಕ್ರಮದ ವಿಶ್ಲೇಷಣೆ 31

**ಅನುಬಂಧ ಡಿ:** ಇತ್ತೀಚೆಗೆ ಪ್ರಾರಂಭಿಸಲಾದ ಮೌಲ್ಯ ಶಿಕ್ಷಣದ ವಿಷಯಾಧಾರಿತ ಮ್ಯಾಪಿಂಗ್ 34

# ಕೃತಜ್ಞತೆಗಳು

ಈ ಕಾರ್ಯನೀತಿ ಸಂಕ್ಷಿಪ್ತ ವರದಿಯು (Policy Brief) ಅನೇಕ ವ್ಯಕ್ತಿಗಳ ಸಂಯೋಜಿತ ಪ್ರಯತ್ನಗಳಿಂದ ಸಾಧ್ಯವಾಗಿದೆ. ಈ ವರದಿಯ ಪರಿಕಲ್ಪನೆಯಿಂದ ಹಿಡಿದು ಅದು ಪೂರ್ಣಗೊಳ್ಳುವವರೆಗೆ ವಿವಿಧ ಹಂತಗಳಲ್ಲಿ ಸಹಕರಿಸಿದ ಎಲ್ಲರಿಗೂ ನಾವು ನಮ್ಮ ಮನದಾಳದಿಂದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಈ ಇಡೀ ಪ್ರಕ್ರಿಯೆಯುದ್ದಕ್ಕೂ ಅಮೂಲ್ಯವಾದ ಬೆಂಬಲ ಮತ್ತು ಮಾರ್ಗದರ್ಶನ ನೀಡಿದ ಯುನಿಸೆಫ್ (UNICEF) ಹೈದರಾಬಾದ್ ಸಂಸ್ಥೆಗೆ ಮತ್ತು ಸಂಶೋಧನಾ ವಿನ್ಯಾಸ, ವಿಶ್ಲೇಷಣೆ ಹಾಗೂ ಈ ವರದಿಯ ಸಹ-ಲೇಖನದಲ್ಲಿ ತಮ್ಮ ಸಹಯೋಗ ಮತ್ತು ಬದ್ಧತೆಯನ್ನು ತೋರಿದ 'ದಿ ಮೆಟ್ರೋಪಾಲಿಟನ್ ಇನ್ಸ್ಟಿಟ್ಯೂಟ್' (TMI) ಸಂಸ್ಥೆಗೆ, ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್ (Enfold Proactive Health Trust) ಕೃತಜ್ಞತೆಯನ್ನು ವ್ಯಕ್ತಪಡಿಸುತ್ತದೆ.

ತಮ್ಮ ಸಮಯ, ಅನುಭವ ಮತ್ತು ದೃಷ್ಟಿಕೋನಗಳನ್ನು ಹಂಚಿಕೊಂಡ ವಿವಿಧ ಭಾಗೀದಾರರಿಗೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ. ಅವರ ಕೊಡುಗೆಗಳು ಈ ವರದಿಯನ್ನು ಶ್ರೀಮಂತಗೊಳಿಸಿವೆ ಮತ್ತು ಇಲ್ಲಿನ ಶಿಫಾರಸುಗಳು ನೈಜ ಅನುಭವಗಳು ಹಾಗೂ ಪ್ರಾಯೋಗಿಕ ಪರಿಣತಿಯನ್ನು ಆಧರಿಸಿವೆ ಎಂಬುದನ್ನು ಖಚಿತಪಡಿಸಿವೆ. ಇದರಲ್ಲಿ ಸ್ವಯಂಸೇವಾ ಸಂಸ್ಥೆಗಳು, ಸರ್ಕಾರಿ ಇಲಾಖೆಗಳು, ಕಾನೂನು ಕ್ಷೇತ್ರದ ಸಮುದಾಯ ಮತ್ತು ಆರೋಗ್ಯ ಕ್ಷೇತ್ರದ ಪ್ರತಿನಿಧಿಗಳು ಹಾಗೂ ಮಕ್ಕಳ ಹಕ್ಕುಗಳು, ಲಿಂಗತ್ವ ಸಮಾನತೆ, ಲೈಂಗಿಕ ಶಿಕ್ಷಣ ಮತ್ತು ವೈಯಕ್ತಿಕ ಸುರಕ್ಷತೆಯ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಇತರರು ಸೇರಿದ್ದಾರೆ.

ವಿಶೇಷವಾಗಿ ಡಾ. ಆದಿತ್ಯ ಗೋಯೆಂಕಾ, ಐಪಿಎಸ್ (ಉಪ ನಿರ್ದೇಶಕರು, ತರಬೇತಿ, ಸರ್ದಾರ್ ವಲ್ಲಭಭಾಯಿ ಪಟೇಲ್ ರಾಷ್ಟ್ರೀಯ ಪೊಲೀಸ್ ಅಕಾಡೆಮಿ), ಡಾ. ಹಿಮಾ ಬಿಂದೂ (ಅಧ್ಯಕ್ಷರು, AHA), ನೀತಿಕಾ ವಿಶ್ವನಾಥ್ (ಸ್ಕ್ವೇರ್ ಸರ್ಕಲ್ ಕ್ಲಿನಿಕ್), ಡಾ. ಪಿ.ಎಂ. ನಾಯರ್ (ನಿವೃತ್ತ ಐಪಿಎಸ್, ಟಾಟಾ ಚೇರ್ ಪ್ರೊಫೆಸರ್, TISS), ಪರಮಿತಾ ಬ್ಯಾನರ್ಜಿ (ಸಂಸ್ಥಾಪಕರು, ದೀಕ್ಷಾ), ಪೂಜಾ ತ ಪಾರಿಯಾ (ಸಂಸ್ಥಾಪಕರು, ಅರ್ಪಣ್), ಡಾ. ರಾಜೇಶ್ ಮೆಹ್ತಾ (MO-CAH, ವಿಶ್ವ ಆರೋಗ್ಯ ಸಂಸ್ಥೆ-SEA ವಲಯ), ರಮ್ಯಾ ಆನಂದ್ (ಸಹ-ಮುಖ್ಯಸ್ಥರು, ತಾರ್ಶಿ), ಡಾ. ಶೈಬ್ಯಾ ಸಲ್ಡಾನ್ಹಾ (ಸಹ- ಸಂಸ್ಥಾಪಕರು, ಎನ್‌ಫೋಲ್ಡ್), ಶಕೀಲಾ ಸಿಂಗ್ (ಪ್ರಾಧ್ಯಾಪಕರು, ಕ್ವಾಜುಲು-ನಟಾಲ್ ವಿಶ್ವವಿದ್ಯಾಲಯ, ದಕ್ಷಿಣ ಆಫ್ರಿಕಾ), ಶಶಾಂಕ್ ಶೇಖರ್ (ಸುಪ್ರೀಂ ಕೋರ್ಟ್ ವಕೀಲರು, ಸಂಭಾವನಾ ಸಂಸ್ಥೆ), ಶಿರೀಶ್ (ನಿರ್ದೇಶಕರು, ಪ್ರಯಾಸ್), ಸೋನಲ್ (ಕಾರ್ಯಕ್ರಮ ಅಧಿಕಾರಿ, SRHR, ವೈ.ಪಿ. ಫೌಂಡೇಶನ್), ಡಾ. ಸುರೇಶ್ ಬಾದಾ ಮಠ್ (ಮನೋವೈದ್ಯಕೀಯ ಪ್ರಾಧ್ಯಾಪಕರು, ನಿಮ್ಹಾನ್ಸ್), ಮತ್ತು ಎಂ. ಆರ್. ಮಮತಾ (ಸದಸ್ಯರು, ಸಿ. ಡಬ್ಲ್ಯೂ.ಸಿ) ಇವರೆಲ್ಲರಿಗೂ ನಾವು ವಿಶೇಷ ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಡಾ. ವಿ. ಚಂದ್ರಮೌಳಿ (MBBS, MSc, PhD (Doctor of Health)), ಇವರು ಹದಿಹರೆಯದವರ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ಹಕ್ಕುಗಳ (Adolescent Sexual and Reproductive Health and Rights) ಕ್ಷೇತ್ರದಲ್ಲಿ ವ್ಯಾಪಕ ಅನುಭವ ಹೊಂದಿರುವ ವಿಶ್ವ ಆರೋಗ್ಯ ಸಂಸ್ಥೆಯ (WHO) ಮಾಜಿ ಉದ್ಯೋಗಿಯಾಗಿದ್ದಾರೆ. ಈ ಕಾರ್ಯನೀತಿ ಸಂಕ್ಷಿಪ್ತ ವರದಿಯು ವಿಶ್ವಾಸಾರ್ಹ ಸಂಶೋಧನೆ ಮತ್ತು ವಾಸ್ತವಿಕ ಪರಿಸ್ಥಿತಿಗಳನ್ನು ಆಧರಿಸಿದೆ ಎಂದು ಖಚಿತಪಡಿಸುವಲ್ಲಿ ಇವರು ನಮಗೆ ಅಪಾರವಾಗಿ ಮಾರ್ಗದರ್ಶನ ನೀಡಿದ್ದಾರೆ.

ಈ ವರದಿಯನ್ನು ಎನ್‌ಫೋಲ್ಡ್‌ನ ಪ್ರಿವೆನ್ಷನ್ (Prevention) ತಂಡದ ಸಹ-ಸಂಸ್ಥಾಪಕಿಯಾದ ಡಾ. ಸಂಗೀತ ಸಕ್ಸೇನಾ ಮತ್ತು ಸೀನಿಯರ್ ಪ್ರೋಗ್ರಾಂ ಮ್ಯಾನೇಜರ್ ಸಂಜನಾ, ಹಾಗೂ ದಿ ಮೆಟ್ರೋಪಾಲಿಟನ್ ಇನ್‌ಸ್ಟಿಟ್ಯೂಟ್‌ನ (TMI) ಸಂಸ್ಥಾಪಕ-ಸಿಇಒ, ಕಾರ್ತಿಕ್ ಸಾಬೂ ಮತ್ತು ಪಾಲಿಸಿ ಹಾಗೂ ರಿಸರ್ಚ್ ವಿಭಾಗದ ಮುಖ್ಯಸ್ಥರಾದ ಶ್ರೀಕರ್ ನಾಗಸುಬ್ರಮಣ್ಯಂರವರು ರಚಿಸಿದ್ದಾರೆ. ಈ ವರದಿಯನ್ನು ವಿಮರ್ಶಿಸಿ, ಅಮೂಲ್ಯವಾದ ಸಲಹೆಗಳನ್ನು ನೀಡಿದ ಎನ್‌ಫೋಲ್ಡ್‌ನ ಸಂಶೋಧನಾ ತಂಡದ ಸದಸ್ಯರಾದ ಸ್ವಾಗತ ರಾಹಾ, ಶ್ರುತಿ ರಾಮಕೃಷ್ಣನ್ ಮತ್ತು ಗೋಪಿಕಾ ನಂಗಿಯಾ ರವರಿಗೆ ನಾವು ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಸರ್ಕಾರಿ ಅಧಿಕಾರಿಗಳ ಸಂದರ್ಶನಗಳನ್ನು ನಡೆಸಲು ನಮಗೆ ಸಹಕರಿಸಿದ ಪ್ರಿವೆನ್ಷನ್ ತಂಡದ ಪುಷ್ಪಲತಾ, ಎಂ, ಗುರುರಾಜ್ ಜಿ.ಜಿ. ಮತ್ತು ಲಿಖಿತ್ ಇವರಿಗೂ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ. ಸಂಶೋಧನೆ ಮತ್ತು ಪಠ್ಯಕ್ರಮದ ವಿಶ್ಲೇಷಣೆಯಲ್ಲಿ ನಮಗೆ ಸಹಾಯ ಮಾಡಿದ TMI ನ ಅನುಪಮಾ ಪ್ರದೀಪನ್ ಮತ್ತು ಎನ್‌ಫೋಲ್ಡ್‌ನ ಮೀ. ಸಾ. ಸುಬ್ರಮಣಿಯಂ ಹಾಗೂ ಜೂಹಿ ಮ್ಯಾಥ್ಯೂ ರವರಿಗೆ, ಮತ್ತು ಇವರಿಗೆ ಬೆಂಬಲ ನೀಡಿದ ಇಂಟರ್ನ್‌ಗಳಾದ ದಿಶಾ ಲಹೋನ್, ರಾಮಾವತ್ ಭಾನುಶಂಕರ್ ನಾಯಕ್ ಮತ್ತು ಮೋನಿಷಾ ಅವರಿಗೆ ನಾವು ಆಭಾರಿಯಾಗಿದ್ದೇವೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ ಅಗತ್ಯತೆಗಳ ವಿಶ್ಲೇಷಣಾ (Needs analysis) ಅಧ್ಯಯನವನ್ನು ನಡೆಸಿದ ಎನ್‌ಫೋಲ್ಡ್‌ನ ಖುಷಿ ಕನ್ಸಲ್ ಮತ್ತು ಜೂಹಿ ಮ್ಯಾಥ್ಯೂರವರ ಸಹಕಾರಕ್ಕೆ ನಾವು ಧನ್ಯವಾದಗಳನ್ನು ಅರ್ಪಿಸುತ್ತೇವೆ.

ಈ ವರದಿಯ ಫಾರ್ಮ್ಯಾಟಿಂಗ್, ಲೇಔಟ್ ಮತ್ತು ವಿನ್ಯಾಸವನ್ನು ಎನ್‌ಫೋಲ್ಡ್‌ನ ಮಲ್ಟಿಮೀಡಿಯಾ ಡಿಸೈನರ್ ರುಮ್‌ಝುಮ್ ಗುಪ್ತಾ ಮತ್ತು ಗ್ರಾಫಿಕ್ ಕಂಟೆಂಟ್ ಎಡಿಟರ್ ಲಾವಣಿ ಸಕ್ಸೇನಾ ಅವರು ನಿರ್ವಹಿಸಿದ್ದಾರೆ.

ಕೊನೆಯದಾಗಿ, ಮಕ್ಕಳು ಮತ್ತು ಯುವಜನತೆಗಾಗಿ ಹೆಚ್ಚು ಸುರಕ್ಷಿತವಾದ, ಸಮನ್ವಯತೆ ಮತ್ತು ಘನತೆಯನ್ನು ಎತ್ತಿಹಿಡಿಯುವ ಕಲಿಕಾ ಪರಿಸರವನ್ನು ನಿರ್ಮಿಸಲು ಶ್ರಮಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿ ಮತ್ತು ಸಂಸ್ಥೆಗೆ ನಾವು ನಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇವೆ. ಈ ಕಾರ್ಯನೀತಿ ಸಂಕ್ಷಿಪ್ತ ವರದಿಯು ಭಾರತದ ಮಕ್ಕಳು ಮತ್ತು ಯುವಜನತೆಯಿಂದ ಪ್ರೇರಿತವಾಗಿದೆ ಮತ್ತು ಅವರಿಗೆ ಇದನ್ನು ಸಮರ್ಪಿಸಲಾಗಿದೆ.

# ಪ್ರಮುಖ ಪದಗಳ ಪದಕೋಶ

**ಅಕ್ಕ ಫೋರ್ಸ್ (Akka Force):** ಇದು ಕರ್ನಾಟಕಕ್ಕೆ ಮಾದರಿಯಾಗಿ ಉಲ್ಲೇಖಿಸಲಾದ ಒಂದು ಸಮುದಾಯದ ಸಹಭಾಗಿತ್ವದ ಉಪಕ್ರಮವಾಗಿದೆ. ಇದು ಸ್ಥಳೀಯ ಪಂಚಾಯತ್‌ಗಳು ಮತ್ತು ಎನ್‌ಜಿಒಗಳ (NGOs) ಸಹಯೋಗದೊಂದಿಗೆ ಪೋಷಕರು ಮತ್ತು ಸಮುದಾಯದ ಮುಖಂಡರಿಗೆ ಪ್ರೌಢಾವಸ್ಥೆ, ಡಿಜಿಟಲ್ ಸುರಕ್ಷತೆ ಮತ್ತು ಗೌರವಾನ್ವಿತ ಸಂಬಂಧಗಳಂತಹ ವಿಷಯಗಳ ಕುರಿತು ದೃಷ್ಟಿಕೋನ ಕಾರ್ಯಕ್ರಮಗಳನ್ನು (Orientation programs) ನಡೆಸುವುದು ಅಥವಾ ಮಾಹಿತಿ ನೀಡುವುದನ್ನು ಒಳಗೊಂಡಿರುತ್ತದೆ.

**ಭರೋಸಾ ಕೇಂದ್ರಗಳು (Bharosa Centres):** ಹಿಂಸೆಗೆ ಒಳಗಾದ ಬಲಿಪಶುಗಳಿಗೆ ಸಮಗ್ರ ನೆರವು ನೀಡುವ ವಿಶೇಷ ಬೆಂಬಲ ಕೇಂದ್ರಗಳು. ಮಕ್ಕಳ ಸಹಾಯವಾಣಿ (1098) ನೊಂದಿಗೆ ಇವುಗಳನ್ನು ಸುರಕ್ಷತೆ, ದೌರ್ಜನ್ಯ ಮತ್ತು ಮಾನಸಿಕ ಆರೋಗ್ಯದ ಬಗ್ಗೆ ನೆರವು ಬಯಸುವ ವಿದ್ಯಾರ್ಥಿಗಳಿಗೆ ನೇರ ಸಂಪರ್ಕ ಕೊಂಡಿಯಾಗಿ ಗುರುತಿಸಲಾಗಿದೆ.

**ಸಮಗ್ರ ಲೈಂಗಿಕ ಶಿಕ್ಷಣ (CSE):** ಲೈಂಗಿಕತೆಯ ಅರಿವಿನ, ಭಾವನಾತ್ಮಕ, ದೈಹಿಕ ಮತ್ತು ಸಾಮಾಜಿಕ ಅಂಶಗಳನ್ನು ಬೋಧಿಸುವ ಪಠ್ಯಕ್ರಮ ಆಧಾರಿತ ಪ್ರಕ್ರಿಯೆ. ಇದು ಯುವಜನರಿಗೆ ಅವರ ಆರೋಗ್ಯ ಮತ್ತು ಘನತೆಯನ್ನು ಕಾಪಾಡಿಕೊಳ್ಳಲು ಅಗತ್ಯವಾದ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳ ಮೂಲಕ ಅವರನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ. ಪ್ರಸ್ತುತ ಪ್ರಸ್ತಾಪಿಸಿರುವಂತೆ 8 ನೇ ತರಗತಿಯವರೆಗೆ ಕಾಯುವ ಬದಲು, ಇದನ್ನು 6 ನೇ ತರಗತಿಯಿಂದಲೇ ಸಂಯೋಜಿಸಬೇಕೆಂದು ಈ ವರದಿಯು ಶಿಫಾರಸು ಮಾಡುತ್ತದೆ.

**ಡಿ.ಎಸ್.ಇ.ಆರ್.ಟಿ (DSERT - ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ):** ಕರ್ನಾಟಕದ ರಾಜ್ಯ ಶೈಕ್ಷಣಿಕ ಪ್ರಾಧಿಕಾರ. ಇದು ಹೊಸ 'ಮೌಲ್ಯ ಶಿಕ್ಷಣ' ಮಾದರಿಯ ವಿನ್ಯಾಸ ಮತ್ತು ಅನುಷ್ಠಾನದ ಜವಾಬ್ದಾರಿಯನ್ನು ಹೊಂದಿದೆ ಹಾಗೂ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ (DIETs) ಮೂಲಕ ಶಿಕ್ಷಕರ ತರಬೇತಿಯ ಮೇಲ್ವಿಚಾರಣೆ ನಡೆಸುತ್ತದೆ.

**ಕರ್ನಾಟಕ ಮಕ್ಕಳ ಹಕ್ಕುಗಳ ವೀಕ್ಷಣಾಲಯ (KCRO):** ಒಂದು ಉಸ್ತುವಾರಿ ಸಂಸ್ಥೆ. ಇದರ 2025 ರ ವರದಿಯು ಕರ್ನಾಟಕದ ಶಾಲೆಗಳಲ್ಲಿ ದೈಹಿಕ ಶಿಕ್ಷೆಯ ಹೆಚ್ಚಿನ ಪ್ರಮಾಣವನ್ನು ಎತ್ತಿ ತೋರಿಸಿದೆ; ಸಮೀಕ್ಷೆಗೆ ಒಳಪಟ್ಟ ಶೇಕಡಾ 38 ರಷ್ಟು ವಿದ್ಯಾರ್ಥಿಗಳು ಶಿಕ್ಷಕರಿಂದ ದೈಹಿಕ ಅಥವಾ ಮೌಖಿಕ ದೌರ್ಜನ್ಯವನ್ನು ಅನುಭವಿಸಿದ್ದಾರೆ ಎಂದು ಇದು ಬಹಿರಂಗಪಡಿಸಿದೆ.

**ಪುನಃಶ್ಚೈತನ್ಯಕಾರಿ ವಿಧಾನ (Restorative Approach - RA) / ಪುನಃಶ್ಚೈತನ್ಯಕಾರಿ ನ್ಯಾಯ:** ಶಿಕ್ಷೆಯ ಬದಲಿಗೆ ಸಂಬಂಧಗಳನ್ನು ಬೆಳೆಸುವ ಮತ್ತು ಹೊಣೆಗಾರಿಕೆಯನ್ನು ಪ್ರಚೋದಿಸುವ ಒಂದು ಬೋಧನಾ ತಂತ್ರ. "ಯಾರು ತಪ್ಪು ಮಾಡಿದ್ದಾರೆ?" ಎಂದು ಕೇಳುವ ಬದಲು, ಇದು ಸಮುದಾಯ ವಲಯಗಳ (Community Circles) ಮೂಲಕ "ಯಾರಿಗೆ ಹಾನಿಯಾಗಿದೆ ಮತ್ತು ಅದನ್ನು ನಾವು ಹೇಗೆ ಸರಿಪಡಿಸಬಹುದು?" ಎಂದು ಪ್ರಶ್ನಿಸುತ್ತದೆ.

**ರಾಜ್ಯ ಶಿಕ್ಷಣ ನೀತಿ (SEP):** ಕರ್ನಾಟಕದ ಪ್ರಸ್ತಾವಿತ ಶೈಕ್ಷಣಿಕ ಚೌಕಟ್ಟು. ಪ್ರಸ್ತುತ, ಕರಡು ರಾಜ್ಯ ಶಿಕ್ಷಣ ನೀತಿಯು 8 ರಿಂದ 12 ನೇ ತರಗತಿಯವರೆಗೆ ಸಮಗ್ರ ಲೈಂಗಿಕ ಶಿಕ್ಷಣವನ್ನು (CSE) ಪರಿಚಯಿಸಲು ಪ್ರಸ್ತಾಪಿಸಿದೆ. ಆದರೆ, ಆರಂಭಿಕ ಪ್ರೌಢಾವಸ್ಥೆ ಮತ್ತು ಡಿಜಿಟಲ್ ಅಪಾಯಗಳನ್ನು ಎದುರಿಸಲು ಇದನ್ನು ಇನ್ನೂ ಮೊದಲೇ ಪ್ರಾರಂಭಿಸಬೇಕು ಎಂದು ಈ ವರದಿಯು ಪ್ರತಿಪಾದಿಸುತ್ತದೆ.

**ಉಡಾನ್ (UDAAN - ಜಾರ್ಖಂಡ್):** ಜಾರ್ಖಂಡ್‌ನಲ್ಲಿ ಸರ್ಕಾರಿ ನೇತೃತ್ವದ ಹದಿಹರೆಯದವರ ಶಿಕ್ಷಣ ಕಾರ್ಯಕ್ರಮ. ಸರ್ಕಾರಿ ಶಾಲಾ ಪಠ್ಯಕ್ರಮಗಳಲ್ಲಿ ಸಮಗ್ರ ಲೈಂಗಿಕ ಶಿಕ್ಷಣವನ್ನು (CSE) ಸಂಯೋಜಿಸುವಲ್ಲಿ ಇದೊಂದು ಯಶಸ್ವಿ ಮತ್ತು ವಿಸ್ತರಿಸಬಹುದಾದ ಮಾದರಿ ಎಂದು ಉಲ್ಲೇಖಿಸಲಾಗಿದೆ.

**ಮೌಲ್ಯ ಶಿಕ್ಷಣ ಪಠ್ಯಕ್ರಮ (ಕರ್ನಾಟಕ):** 2025-26 ಶೈಕ್ಷಣಿಕ ವರ್ಷದಲ್ಲಿ 1 ರಿಂದ 10 ನೇ ತರಗತಿಗಳಿಗೆ ಪ್ರಾರಂಭಿಸಲಾಗುತ್ತಿರುವ ಪರಿವರ್ತನಾ ಪಠ್ಯಕ್ರಮ. ಇದು ಸಹಾನುಭೂತಿ, ಡಿಜಿಟಲ್ ಸುರಕ್ಷತೆ, ಲಿಂಗತ್ವ ಸಮಾನತೆ ಮತ್ತು ವೈಜ್ಞಾನಿಕ ಮನೋಭಾವ ಸೇರಿದಂತೆ 10 ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿದ್ದು, ಪ್ರಸ್ತಾವಿತ ಯೋಗಕ್ಷೇಮದ ಚೌಕಟ್ಟಿಗೆ ಬುನಾದಿಯಾಗಿ ಕಾರ್ಯನಿರ್ವಹಿಸುತ್ತದೆ.

# ಕಾರ್ಯನಿರ್ವಾಹಕ ಸಾರಾಂಶ

ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ (RKSK), ಹದಿಹರೆಯದವರ ಶಿಕ್ಷಣ ಕಾರ್ಯಕ್ರಮ (AEP), ಶಾಲಾ ಆರೋಗ್ಯ ಕಾರ್ಯಕ್ರಮಗಳಂತಹ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಉಪಕ್ರಮಗಳು ಹಾಗೂ ಕರ್ನಾಟಕದ ಹೆಮ್ಮೆಯ ಮೌಲ್ಯ ಶಿಕ್ಷಣ ಪಠ್ಯಕ್ರಮವು (ಲಿಂಗ ಸಮಾನತೆ, ಅನುಭೂತಿ ಮತ್ತು ಡಿಜಿಟಲ್ ಸುರಕ್ಷತೆಯನ್ನು ಒಳಗೊಂಡಿದೆ) ಮಕ್ಕಳ ಆರೋಗ್ಯ, ರಕ್ಷಣೆ ಮತ್ತು ಶಿಕ್ಷಣವನ್ನು ಉತ್ತೇಜಿಸಲು ಬಲವಾದ ಅಡಿಪಾಯವನ್ನು ಹಾಕಿವೆ. ಕರ್ನಾಟಕವು ತನ್ನದೇ ಆದ 'ಮಕ್ಕಳ ರಕ್ಷಣಾ ನೀತಿಯನ್ನು[1] (Child Protection Policy) ಹೊಂದಿರುವ ಭಾರತದ ಕೆಲವೇ ರಾಜ್ಯಗಳಲ್ಲಿ ಒಂದಾಗಿದೆ. ಕರ್ನಾಟಕದ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸುರಕ್ಷತೆಗಾಗಿ, ನಿರ್ದಿಷ್ಟ ಅಪಾಯಗಳನ್ನು ಎದುರಿಸಲು ಇರುವ ಈ ಕ್ರಮಗಳನ್ನು ಒಟ್ಟುಗೂಡಿಸಿ, ಒಂದು ಸುಸಂಘಟಿತ ಮತ್ತು ಪೂರ್ವಭಾವಿ ವ್ಯವಸ್ಥೆಯನ್ನಾಗಿ (Cohesive proactive system) ರೂಪಿಸುವುದಾಗಿದೆ. ಈ ವ್ಯವಸ್ಥೆಯು ಸಮಸ್ಯೆಗಳ ಪರಸ್ಪರ ಸಂಬಂಧವನ್ನು ಗುರುತಿಸಿ, ಮಗುವಿನ ಸರ್ವತೋಮುಖ ಬೆಳವಣಿಗೆ ಮತ್ತು ಅವರು ವಾಸಿಸುವ ಪರಿಸರವನ್ನುಒಳಗೊಳ್ಳುತ್ತದೆ.

ಕರ್ನಾಟಕದಲ್ಲಿ ಪ್ರತಿದಿನ ಸರಾಸರಿ ಕನಿಷ್ಠ 11 ಮಕ್ಕಳು ಅಪರಾಧಕ್ಕೆ ಬಲಿಯಾಗುತ್ತಿದ್ದಾರೆ ಎಂದು ವರದಿಯಾಗಿದೆ.[2] ಸಂಶೋಧನೆಗಳು ಪ್ರೌಢಾವಸ್ಥೆ (Puberty), ಸಮ್ಮತಿ (Consent) ಮತ್ತು ತಾರತಮ್ಯದ (ವಿಶೇಷವಾಗಿ ಲಿಂಗತ್ವ, ಅಲ್ಪಸಂಖ್ಯಾತ ಮತ್ತು ಇಂಟರ್‌ಸೆಕ್ಸ್ ವಿದ್ಯಾರ್ಥಿಗಳ ಬಗ್ಗೆ) ಸುತ್ತಲೂ 'ಮೌನದ ಸಂಸ್ಕೃತಿ' ಆವರಿಸಿರುವುದನ್ನು ಒತ್ತಿಹೇಳುತ್ತವೆ. ಇದರ ಪರಿಣಾಮವಾಗಿ ಅಸುರಕ್ಷಿತ ಅಭ್ಯಾಸಗಳು, ದೌರ್ಜನ್ಯದ ವರದಿಯಲ್ಲಿ ವಿಳಂಬ, ತಪ್ಪು ಮಾಹಿತಿ ಮತ್ತು ಚಿಕ್ಕ ವಯಸ್ಸಿನಲ್ಲೇ ಸ್ಮಾರ್ಟ್‌ಫೋನ್ ಬಳಕೆಯಿಂದಾಗಿ ಡಿಜಿಟಲ್ ಅಪಾಯಗಳು ಎದುರಾಗುತ್ತಿವೆ; ಇವೆಲ್ಲವೂ ಕಲಿಕೆಯ ಫಲಿತಾಂಶ ಮತ್ತು ಶಾಲಾ ಹಾಜರಾತಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿವೆ.[3]

ಇದಲ್ಲದೆ, ಕರ್ನಾಟಕದಲ್ಲಿ ಹದಿಹರೆಯದವರಲ್ಲಿ ಕನಿಷ್ಠ 94.5% ರಷ್ಟು ಮಂದಿ ಮನೆಯಲ್ಲಿ ಸ್ಮಾರ್ಟ್‌ಫೋನ್ ಸಂಪರ್ಕ ಹೊಂದಿದ್ದಾರೆ. [4] ಇದು ಡಿಜಿಟಲ್ ಲೈಂಗಿಕ ದೌರ್ಜನ್ಯ ಸೇರಿದಂತೆ ಹಲವು ಅಪಾಯಗಳನ್ನು ತಂದೊಡ್ಡುತ್ತಿದ್ದು, ಶಾಲೆಗಳು ಈ ನಿಟ್ಟಿನಲ್ಲಿ ಪೂರ್ವಭಾವಿ ಕ್ರಮಗಳನ್ನು ಕೈಗೊಳ್ಳುವುದು ಅತ್ಯಗತ್ಯವಾಗಿದೆ. ಟ್ರಾನ್ಸ್‌ಜೆಂಡರ್ (ಮಂಗಳಮುಖಿಯರ) ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯ್ದೆ 2019 ಮತ್ತು ಸುಪ್ರೀಂ ಕೋರ್ಟ್ ನಿರ್ದೇಶನಗಳಂತಹ ಕಾನೂನು ಆದೇಶಗಳಿದ್ದಾಗ್ಯೂ,[5] ಲಿಂಗತ್ವ ಅಲ್ಪಸಂಖ್ಯಾತರು, ವಿಕಲಚೇತನರು ಮತ್ತು ಅಂಚಿನಲ್ಲಿರುವ ಸಮುದಾಯಗಳ ಮಕ್ಕಳ ವಿರುದ್ಧದ ತಾರತಮ್ಯವು ಶಾಲೆಯಿಂದ ಅವರ ಬಹಿಷ್ಕಾರಕ್ಕೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಅವರು ಶಾಲೆಯನ್ನು ಅರ್ಧಕ್ಕೆ ಬಿಡಲು (Dropout) ಕಾರಣವಾಗುತ್ತಿದೆ.[6]

ಕರ್ನಾಟಕ ಸರ್ಕಾರವು ಈಗಾಗಲೇ ಪರಿವರ್ತನಾತ್ಮಕ ಬದಲಾವಣೆಗೆ ಬೇಕಾದ ಭದ್ರ ಬುನಾದಿಯನ್ನು ಹಾಕಿದೆ. ವಿದ್ಯಾರ್ಥಿಗಳಲ್ಲಿ ದೃಢವಾದ ಮೌಲ್ಯಗಳು, ನಾಗರಿಕ ಜವಾಬ್ದಾರಿ ಮತ್ತು ಭಾವನಾತ್ಮಕ ಬುದ್ಧಿವಂತಿಕೆಯನ್ನು ಬೆಳೆಸಲು, 2025-26ನೇ ಶೈಕ್ಷಣಿಕ ವರ್ಷದಿಂದ 1 ರಿಂದ 10ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ರಾಜ್ಯವು 'ಮೌಲ್ಯ ಶಿಕ್ಷಣ' (Value Education) ಪಠ್ಯಕ್ರಮವನ್ನು ಪ್ರಾರಂಭಿಸುತ್ತಿದೆ.[7] ಈ ಕಾರ್ಯಕ್ರಮವು ಚಟುವಟಿಕೆಗಳು ಮತ್ತು ಅನುಭವದ ಕಲಿಕೆಯ ಮೂಲಕ ಅನುಭೂತಿ , ಡಿಜಿಟಲ್ ಸುರಕ್ಷತೆ, ಲಿಂಗತ್ವ ಸಮಾನತೆ ಮತ್ತು ವೈಜ್ಞಾನಿಕ ಮನೋಭಾವದಂತಹ 10 ಪ್ರಮುಖ ಮೌಲ್ಯಗಳನ್ನು ಒಳಗೊಂಡಿರಲಿದೆ.

ಇದಲ್ಲದೆ, ಕರ್ನಾಟಕದ ಪ್ರಸ್ತಾವಿತ ರಾಜ್ಯ ಶಿಕ್ಷಣ ನೀತಿಯು (SEP), 8 ರಿಂದ 12ನೇ ತರಗತಿಯವರೆಗೆ 'ಸಮಗ್ರ ಲೈಂಗಿಕ ಶಿಕ್ಷಣ'ವನ್ನು (Comprehensive Sexuality Education - CSE) ನೀಡಲು ಶಿಫಾರಸು ಮಾಡಿದೆ. ಇದು ಶ್ಲಾಘನೀಯ ಹೆಜ್ಜೆಯಾದರೂ, ಮಗುವು 8ನೇ ತರಗತಿಗೆ ಬರುವವರೆಗೆ ಕಾಯುವುದು ಸಮರ್ಪಕವಲ್ಲ ಮತ್ತು ಸುರಕ್ಷಿತವೂ ಅಲ್ಲ.[8] ಏಕೆಂದರೆ ಪ್ರೌಢಾವಸ್ಥೆಯ ಬದಲಾವಣೆಗಳು 8 ವರ್ಷ ವಯಸ್ಸಿನಲ್ಲೇ ಪ್ರಾರಂಭವಾಗುತ್ತವೆ. ಅಲ್ಲದೆ, [9] ಚಿಕ್ಕ ವಯಸ್ಸಿನಲ್ಲೇ ಸ್ಮಾರ್ಟ್‌ಫೋನ್ ಬಳಕೆ ಮತ್ತು ಸಾಮಾಜಿಕ ಪ್ರಭಾವಕ್ಕೆ ಮಕ್ಕಳು ಒಳಗಾಗುತ್ತಿರುವುದು, ಇನ್ನೂ ಸಣ್ಣ ವಯಸ್ಸಿನಲ್ಲೇ ಇಂತಹ ಮಧ್ಯವರ್ತನೆಗಳ ಅಥವಾ ಮಾರ್ಗದರ್ಶನದ ಅಗತ್ಯವನ್ನು ಒತ್ತಿಹೇಳುತ್ತದೆ.

---

[1] Department of School Education and Literacy, Government of Karnataka. (2025). Karnataka Child Protection Policy.
[2] Crime in India 2023, NCRB
[3] Appendix C
[4] Annual Status of Education Report 2024, Pratham Foundation
[5] Mehra D, Lakiang T, Kathuria N, Kumar M, Mehra S, Sharma S. (2022). Mental Health Interventions among Adolescents in India: A Scoping Review.
[6] National Council of Educational Research and Training, Department of Gender Studies. Inclusion of transgender children in school education: Concerns and roadmap.
[7] Vyas, A. (2025, November 18). Karnataka's new textbook takes on bullying, body shaming, and stereotypes. The Times of India.
[8] Express News Service. (2025, August 12). Karnataka SEP recommends sex education, RTE expansion. The New Indian Express.
[9] Ammerman, R. T., & Hersen, M. (Eds.). (2023). Child abuse and neglect. StatPearls Publishing.

ಮಗುವಿನ  ಸರ್ವತೋಮುಖ  ಕ್ಷೇಮವನ್ನು ಉದ್ದೇಶಿಸಿ ಪ್ರತ್ಯೇಕ ಪ್ರಯತ್ನಗಳ ಬದಲು ಒಂದು ಸುಸಂಘಟಿತ ಮತ್ತು ಪಠ್ಯಕ್ರಮ-ಚಾಲಿತ ಚೌಕಟ್ಟನ್ನು ಸ್ಥಾಪಿಸುವುದು  ಪ್ರಸ್ತುತ ತುರ್ತು ಅಗತ್ಯವಾಗಿದೆ. ಈ ವರದಿಯು ಕರ್ನಾಟಕ ಶಿಕ್ಷಣ ಇಲಾಖೆಗೆ ಒಂದು ಪ್ರಮುಖ ಪ್ರಸ್ತಾವನೆಯನ್ನು ಮುಂದಿಡುತ್ತದೆ: 6ನೇ ತರಗತಿಯಿಂದಲೇ ಪ್ರಸ್ತುತ ಇರುವ  ಪಠ್ಯಪುಸ್ತಕಗಳಲ್ಲಿ ವಯಸ್ಸಿಗನುಗುಣವಾದ  'ಲಿಂಗ ಸಮಾನತೆ' ಮತ್ತು 'ಸಮಗ್ರ ಲೈಂಗಿಕ ಶಿಕ್ಷಣ'ವನ್ನು (CSE) ಅಳವಡಿಸುವುದು ಹಾಗೂ 11 ಮತ್ತು 12ನೇ ತರಗತಿಗಳಿಗೆ ಪ್ರತ್ಯೇಕ ಪಠ್ಯಕ್ರಮವನ್ನು ಪರಿಚಯಿಸುವುದು. ಇದಲ್ಲದೆ, ಶಾಲಾ ಪರಿಸರದಲ್ಲಿ ಶಿಕ್ಷಾಧಾರಿತ ಪ್ರತಿಕ್ರಿಯೆಗಳ  ಬದಲಿಗೆ ಸಂಬಂಧಗಳ ಸುಧಾರಣೆ ಮತ್ತು ಹಂಚಿಕೊಂಡ  ಹೊಣೆಗಾರಿಕೆಯನ್ನು ಉತ್ತೇಜಿಸುವ 'ಪುನಃಶ್ಚೈತನ್ಯಕಾರಿ ಅಭ್ಯಾಸಗಳನ್ನು' (Restorative Practices) ಅಳವಡಿಸಲು ನಾವು ಶಿಫಾರಸು ಮಾಡುತ್ತೇವೆ. ಇದರಿಂದ ಶಾಲೆಗಳು ಭಯ ಮತ್ತು ಶಿಕ್ಷೆಯ ಬದಲಿಗೆ ಪರಾನುಭೂತಿ ಮತ್ತು ಜವಾಬ್ದಾರಿಯನ್ನು ಕಲಿಸುವ ಮೂಲಕ ಎಲ್ಲರಿಗೂ ಸುರಕ್ಷಿತ ತಾಣಗಳಾಗಬಹುದು.[10]

ನೀತಿಗಳ ಮರುಹೊಂದಾಣಿಕೆ, ಹಂತಾನುಹಂತವಾಗಿ  ಅನುಷ್ಠಾನ ಮತ್ತು **ಡಿಎಸ.ಇಆರ.ಟಿ (DSERT) ಹಾಗೂ ಡಯಟ್ (DIET)** ಕೇಂದ್ರಗಳಂತಹ ಪ್ರಸ್ತುತ  ವ್ಯವಸ್ಥೆಗಳ ಸದ್ಬಳಕೆಯ ಮೂಲಕ ಈ ಸಮಗ್ರ ವಿಧಾನವನ್ನು ಜಾರಿಗೆ ತರುವುದು ಅತ್ಯಂತ ಸುಲಭ ಸಾಧ್ಯವಾಗಿದೆ. ಶಿಕ್ಷಕರ ತರಬೇತಿ ಮತ್ತು ಸಾಂಸ್ಥಿಕ ರಕ್ಷಣಾ ವ್ಯವಸ್ಥೆಗಳ ಬೆಂಬಲದೊಂದಿಗೆ ಈ ಪ್ರಮುಖ ಅಂಶಗಳನ್ನು ಶಾಲಾ ಪಠ್ಯಕ್ರಮದಲ್ಲಿ ಅಳವಡಿಸುವ ಮೂಲಕ, ಕರ್ನಾಟಕ ಶಿಕ್ಷಣ ಇಲಾಖೆಯು ಮಕ್ಕಳ ರಕ್ಷಣೆಯನ್ನು ಬಲಪಡಿಸಬಹುದು. ಇದು ಹದಿಹರೆಯದವರ ಆರೋಗ್ಯ ಮತ್ತು ಲಿಂಗ ಸಮಾನತೆಯನ್ನು ಸುಧಾರಿಸುವುದಲ್ಲದೆ, , ಸ್ಥೈರ್ಯವಂತ ಮತ್ತು ಜವಾಬ್ದಾರಿಯುತ ನಾಗರಿಕರನ್ನು ರೂಪಿಸಲು ಸಹಾಯ ಮಾಡುತ್ತದೆ. ಈ ಕ್ರಮವು ರಾಷ್ಟ್ರೀಯ ಶಿಕ್ಷಣ ನೀತಿ (NEP) 2020, ಕರ್ನಾಟಕದ ಮೌಲ್ಯ ಶಿಕ್ಷಣ ಕಾರ್ಯಕ್ರಮ, ಪ್ರಸ್ತಾವಿತ ರಾಜ್ಯ ಶಿಕ್ಷಣ ನೀತಿ (SEP), ಭಾರತಸಂವಿಧಾನ, **ಸುಪ್ರೀಂ ಕೋರ್ಟ್ ತೀರ್ಪುಗಳು ಮತ್ತು ಸುಸ್ಥಿರ ಅಭಿವೃದ್ಧಿ ಗುರಿಗಳಿಗೆ (SDG 3, 4, 5 ಮತ್ತು 16) ಪೂರಕವಾಗಿದೆ.**

[10] Katherine Evans & Dorothy Vaandering, The Little Book of Restorative Justice in Education, - Fostering Responsibility, Healing, and Hope in Schools.

# ಪೀಠಿಕೆ

ಇಂದಿನ ಕಾಲದಲ್ಲಿ ಕರ್ನಾಟಕದ ಮಕ್ಕಳು ಮತ್ತು ಹದಿಹರೆಯದವರು ಪರಸ್ಪರ ಸಂಪರ್ಕಿತ ಗಂಭೀರ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಹೆಚ್ಚುತ್ತಿರುವ **ಬಾಲ್ಯ ವಿವಾಹ ಪ್ರಕರಣಗಳು, ಹೆಚ್ಚಿನ ಪ್ರಮಾಣ, ಹದಿಹರೆಯದವರ ಗರ್ಭಧಾರಣೆ, ಶಾಲಾ ಪರಿಸರದಲ್ಲಿ ನಡೆಯುವ ಲಿಂಗ ಆಧಾರಿತ ದೌರ್ಜನ್ಯಗಳು (SRGBV) ಹಾಗೂ ಪ್ರೌಢಾವಸ್ಥೆಯ ಬದಲಾವಣೆಗಳ ಸುತ್ತಲಿರುವ ಮೌನ ಮತ್ತು ಸಾಮಾಜಿಕ ಕಳಂಕಗಳು ಇವುಗಳಲ್ಲಿ ಪ್ರಮುಖವಾಗಿವೆ.**

*Table 1. ಪ್ರಮುಖ ಸವಾಲುಗಳು*

## ಹದಿಹರೆಯದವರ ಗರ್ಭಧಾರಣೆ (15-19 ವರ್ಷ ವಯಸ್ಸು)

*ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ - ಎನ್‌ಎಫ್‌ಎಚ್‌ಎಸ್ -5 (2019-21)*
*ಕರ್ನಾಟಕ ಆರೋಗ್ಯ ಇಲಾಖೆಯ ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ (RCH) ಪೋರ್ಟಲ್.*

**5.4%** ಮಹಿಳೆಯರು (15-19 ವಯಸ್ಸು) ಈಗಾಗಲೇ ತಾಯಂದಿರಾಗಿದ್ದಾರೆ ಅಥವಾ ಗರ್ಭಿಣಿಯರಾಗಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಈ ಪ್ರಮಾಣ **7.3%** ರಷ್ಟಿದೆ.

2021–24ರ ಅವಧಿಯಲ್ಲಿ ರಾಜ್ಯದಲ್ಲಿ 33,621 ಹದಿಹರೆಯದವರ ಗರ್ಭಧಾರಣೆಗಳು ದಾಖಲಾಗಿದ್ದು, ಇದರಲ್ಲಿ ಬೆಂಗಳೂರು ನಗರ ಜಿಲ್ಲೆ ಮಾತ್ರವೇ 4,300ಕ್ಕೂ ಹೆಚ್ಚು ಪ್ರಕರಣಗಳನ್ನು ಹೊಂದಿದೆ.

ಗ್ರಾಮೀಣ ಪ್ರದೇಶಗಳಲ್ಲಿನ ಈ ಪ್ರಮಾಣವು ರಾಷ್ಟ್ರೀಯ ಸರಾಸರಿಗಿಂತ **(6.8%)** ಹೆಚ್ಚಿದೆ.

## ಬಾಲ್ಯ ವಿವಾಹ

*NFHS-5 (2019-21)*

20-24 ವರ್ಷ ವಯಸ್ಸಿನ ಮಹಿಳೆಯರಲ್ಲಿ **21.3%** ರಷ್ಟು ಮಂದಿ 18 ವರ್ಷ ತುಂಬುವ ಮೊದಲೇ ವಿವಾಹವಾಗಿದ್ದಾರೆ.

ಇದು ರಾಷ್ಟ್ರೀಯ ಸರಾಸರಿಗಿಂತ **(23.3%)** ಕಡಿಮೆ ಇದೆಯಾದರೂ, ನಿರಂತರ ರಕ್ಷಣಾ ಕ್ರಮಗಳ ಅಗತ್ಯವನ್ನು ಒತ್ತಿಹೇಳುತ್ತದೆ.

## ಮಕ್ಕಳ ಮೇಲಿನ ದೌರ್ಜನ್ಯ (ಪೋಕ್ಸೊ - POCSO ಕಾಯ್ದೆಯಡಿ ದಾಖಲಾದ ಪ್ರಕರಣಗಳು)

*ಎನ್.ಸಿ.ಆರ್.ಬಿ (NCRB), ಭಾರತದಲ್ಲಿನ ಅಪರಾಧ ವರದಿ, 2023*

ಕರ್ನಾಟಕದಲ್ಲಿ 2022ರಿಂದ ಪೋಕ್ಸೊ (POCSO) ಪ್ರಕರಣಗಳಲ್ಲಿ **9%** ಕ್ಕಿಂತ ಹೆಚ್ಚು ಏರಿಕೆ ಕಂಡುಬಂದಿದೆ.

ದಾಖಲಾದ ಪ್ರಕರಣಗಳ ಈ ತೀವ್ರ ಏರಿಕೆಯು ಮಕ್ಕಳ ಸುರಕ್ಷತೆಯ ಬಗ್ಗೆ ಕಳವಳವನ್ನು ಉಂಟುಮಾಡುತ್ತದೆ. ಅದೇ ಸಮಯದಲ್ಲಿ ಪ್ರಕರಣಗಳ ವರದಿ ಮಾಡುವಿಕೆ ಹೆಚ್ಚಾಗಿರುವುದನ್ನು ಇದು ಸೂಚಿಸುತ್ತದೆ, ಇದು ಮಕ್ಕಳ ಮೇಲಿನ ದೌರ್ಜನ್ಯ ತಡೆಗಟ್ಟುವ ಶಿಕ್ಷಣದ (Preventative education) ಅಗತ್ಯತೆಯನ್ನು ಒತ್ತಿಹೇಳುತ್ತದೆ.

## ಡಿಜಿಟಲ್ ಅಪಾಯಗಳು / ಸ್ಮಾರ್ಟ್‌ಫೋನ್ ಬಳಕೆ

*ಎಎಸ್ಇಆರ್ (ASER), 2024; ಭಾರತೀಯ ಹದಿಹರೆಯದವರ ಮಾನಸಿಕ ಆರೋಗ್ಯ ಅಧ್ಯಯನಗಳು*

**94.5%** ಹದಿಹರೆಯದವರು (14-16 ವರ್ಷ ವಯಸ್ಸು) ಮನೆಯಲ್ಲಿ ಸ್ಮಾರ್ಟ್‌ಫೋನ್ ಬಳಸುತ್ತಿದ್ದಾರೆ.

ಸರಿಯಾದ ಮಾರ್ಗದರ್ಶನವಿಲ್ಲದೆ, ಬಹಳ ಬೇಗನೆ ಡಿಜಿಟಲ್ ತಂತ್ರಜ್ಞಾನದ ಬಳಕೆ, ಆನ್‌ಲೈನ್ ಲೈಂಗಿಕ ದೌರ್ಜನ್ಯ ಮತ್ತು ಸ್ಮಾರ್ಟ್‌ಫೋನ್ ಬಳಕೆಯ ಸಮಸ್ಯೆಗಳ ಅಪಾಯವನ್ನು ಹೆಚ್ಚಿಸುತ್ತದೆ. ಇದು ಶಾಲೆಗಳಲ್ಲಿ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕಾದ ಅಗತ್ಯತೆಯನ್ನು ಒತ್ತಿಹೇಳುತ್ತದೆ.

ಸಣ್ಣ ವಯಸ್ಸಿನಲ್ಲೇ ಲೈಂಗಿಕ ಶಿಕ್ಷಣದ ಕೊರತೆಯು, ಮಕ್ಕಳು ತಮ್ಮ ಬದಲಾಗುತ್ತಿರುವ ದೇಹದ ಬಗ್ಗೆ ತಪ್ಪು ಕಲ್ಪನೆಗಳನ್ನು ಹೊಂದಲು ಕಾರಣವಾಗುತ್ತದೆ. ಇದು ಲಿಂಗತ್ವ ಮತ್ತು ಸಂಬಂಧಗಳ ಬಗ್ಗೆ ಗೊಂದಲಕಾರಿ ಅಥವಾ ಹಾನಿಕಾರಕ ನಂಬಿಕೆಗಳಿಗೆ ಮತ್ತು ನೈಸರ್ಗಿಕ ದೈಹಿಕ ಬೆಳವಣಿಗೆಗಳ ಬಗ್ಗೆ ಲಜ್ಜೆಯ (Shame) ಭಾವನೆ ಮೂಡಲು ದಾರಿ ಮಾಡಿಕೊಡುತ್ತದೆ. ಸಮ್ಮತಿ (Consent) ಅಥವಾ ವೈಯಕ್ತಿಕ ಗಡಿಗಳ (Boundaries) ಬಗ್ಗೆ ಸರಿಯಾದ ಮಾಹಿತಿ ಇಲ್ಲದೆ, ಹದಿಹರೆಯದವರು ತಮ್ಮೊಂದಿಗೆ ಇತರರು ನಡೆದುಕೊಳ್ಳುವ ಅನುಚಿತ ನಡವಳಿಕೆಯನ್ನು ಗುರುತಿಸಲು ಅಥವಾ ಅದನ್ನು ವರದಿ ಮಾಡಲು ಸಾಧ್ಯವಾಗದಿರಬಹುದು.

# ಸಂಶೋಧನಾ ವಿಧಾನ

ಈ ವರದಿಯು ಈ ಕೆಳಗಿನ ಸಮಗ್ರ ವಿಶ್ಲೇಷಣೆಗಳನ್ನು ಆಧರಿಸಿದೆ: ಕರ್ನಾಟಕ ರಾಜ್ಯ ಪಠ್ಯಪುಸ್ತಕಗಳ ವಿಮರ್ಶೆ, 13 ಪ್ರಮುಖ ವ್ಯಕ್ತಿಗಳ ಸಂದರ್ಶನ, ಲಭ್ಯವಿರುವ ದ್ವಿತೀಯ ಮಾಹಿತಿ ಸಂಪನ್ಮೂಲಗಳ ವಿಮರ್ಶೆ, ಅಂತರರಾಷ್ಟ್ರೀಯ ಮತ್ತು ದೇಶೀಯ ಪ್ರಕರಣಗಳ ಅಧ್ಯಯನ (Case studies) ಹಾಗೂ ರಾಷ್ಟ್ರ ಮತ್ತು ರಾಜ್ಯ ಮಟ್ಟದ ಸರ್ಕಾರಿ ಯೋಜನೆಗಳು ಮತ್ತು ನೀತಿಗಳು.

### ರಾಜ್ಯ ಪಠ್ಯಪುಸ್ತಕಗಳ ವಿಮರ್ಶೆ:

2011ರ ಕರ್ನಾಟಕ ರಾಜ್ಯ ಪಠ್ಯಕ್ರಮದ ಚೌಕಟ್ಟಿನ ಅಡಿಯಲ್ಲಿನ ಈ ಕೆಳಗಿನ ಪಠ್ಯಪುಸ್ತಕಗಳನ್ನು ವಿಶ್ಲೇಷಿಸಲಾಗಿದೆ: 1 ರಿಂದ 10ನೇ ತರಗತಿಯ ಇಂಗ್ಲಿಷ್ ಪಠ್ಯಕ್ರಮ, 6 ರಿಂದ 10ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಕ್ರಮ, 3 ರಿಂದ 5ನೇ ತರಗತಿಯ ಪರಿಸರ ಅಧ್ಯಯನ ಪಠ್ಯಕ್ರಮ ಮತ್ತು 8 ರಿಂದ 10ನೇ ತರಗತಿಯ ಜೀವವಿಜ್ಞಾನ ಪಠ್ಯಕ್ರಮ. ಈ ವಿಷಯಗಳನ್ನು ಮೌಲ್ಯಮಾಪನ ಮಾಡಲು 'ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್'ನ ಪಠ್ಯಕ್ರಮ ವಿನ್ಯಾಸ ತಂಡದ ಮಾನದಂಡಗಳು, UNFPA ದ ಲೈಂಗಿಕ ಶಿಕ್ಷಣ ಕುರಿತಾದ ಅಂತರರಾಷ್ಟ್ರೀಯ ತಾಂತ್ರಿಕ ಮಾರ್ಗದರ್ಶನ, WHO ನೀಡಿದ ತಾಂತ್ರಿಕ ಮಾರ್ಗದರ್ಶನ ಮತ್ತು NEP 2020 ರ ನಿರ್ದೇಶನಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

### ಪಠ್ಯಕ್ರಮದ ಮ್ಯಾಪಿಂಗ್:

ಹೊಸದಾಗಿ ಪ್ರಾರಂಭಿಸಲಾದ 'ಮೌಲ್ಯ ಶಿಕ್ಷಣ' ಪಠ್ಯಕ್ರಮದ ವಿಷಯಾಧಾರಿತ ವಿಶ್ಲೇಷಣೆ (Topical Mapping).

### ಪ್ರಮುಖ ವ್ಯಕ್ತಿಗಳ ಸಂದರ್ಶನ:

13 ತಜ್ಞರನ್ನು ಸಂದರ್ಶಿಸಲಾಗಿದೆ: ಕರ್ನಾಟಕದಲ್ಲಿ ಕೆಲಸ ಮಾಡಿದ 5 ನಾಗರಿಕ ಸಮಾಜ ಸಂಸ್ಥೆಗಳು (CSOs) ಮತ್ತು ಕರ್ನಾಟಕದ DSERT, ಮಕ್ಕಳ ಕಲ್ಯಾಣ ಸಮಿತಿ (CWC), ಜಿಲ್ಲಾ ಮಕ್ಕಳ ರಕ್ಷಣಾ ಘಟಕ (DCPO) ಮತ್ತು ಕರ್ನಾಟಕ ಪೊಲೀಸ್ ಇಲಾಖೆಯ ಅಧಿಕಾರಿಗಳು.

### ಡೆಸ್ಕ್ ರಿಸರ್ಚ್ (ಪೂರಕ ಸಂಶೋಧನೆ):

ಈ ವಿಮರ್ಶೆಯು ಸಾಂವಿಧಾನಿಕ ಮತ್ತು ಕಾನೂನುಬದ್ಧ ಹೊಣೆಗಾರಿಕೆಗಳು, ಸರ್ಕಾರಿ ನೀತಿಗಳು, ಯೋಜನೆಗಳು ಮತ್ತು ಕಾರ್ಯಕ್ರಮಗಳು ಹಾಗೂ ಅಂತರರಾಷ್ಟ್ರೀಯ ಮತ್ತು ದೇಶೀಯ ಪ್ರಕರಣಗಳ ಅಧ್ಯಯನಗಳನ್ನು ಒಳಗೊಂಡಿದೆ.

# ಹಿನ್ನೆಲೆ

ಕರ್ನಾಟಕ ಸರ್ಕಾರವು ಮಕ್ಕಳ ಕ್ಷೇಮವನ್ನು ಉತ್ತೇಜಿಸಲು ಕೆಲವು ಅತ್ಯುತ್ತಮ ಉಪಕ್ರಮಗಳನ್ನು ಕೈಗೊಂಡಿದೆ. ಇತ್ತೀಚೆಗೆ ಪರಿಚಯಿಸಲಾದ 'ಮೌಲ್ಯ ಶಿಕ್ಷಣ' (Value Education) ಪಠ್ಯಕ್ರಮ ಮತ್ತು 'ಸಮಗ್ರ ಲೈಂಗಿಕ ಶಿಕ್ಷಣ'ದ (CSE) ಕುರಿತಾದ ಪ್ರಸ್ತಾವಿತ 'ರಾಜ್ಯ ಶಿಕ್ಷಣ ನೀತಿ' (SEP)[11] ಮಗುವಿನ ಸರ್ವತೋಮುಖ ಬೆಳವಣಿಗೆಗೆ ಬಲವಾದ ಅಡಿಪಾಯವನ್ನು ಒದಗಿಸಿವೆ.[12] ಆದಾಗ್ಯೂ, ಕರ್ನಾಟಕದ ಶಾಲಾ ಮಕ್ಕಳು ತಮ್ಮ ಸರ್ವತೋಮುಖ ಕ್ಷೇಮದ ಹಾದಿಯಲ್ಲಿ ಇನ್ನೂ ಅನೇಕ ವ್ಯವಸ್ಥಿತ ಅಡೆತಡೆಗಳನ್ನು (Systemic obstacles) ಎದುರಿಸುತ್ತಲೇ ಇದ್ದಾರೆ.




### ಲಿಂಗತ್ವ  ಸಮತೆ ಮತ್ತು ಲೈಂಗಿಕ ಆರೋಗ್ಯದಲ್ಲಿನ ಕೊರತೆಗಳು:

ಸಮಾಜದಲ್ಲಿ ಆಳವಾಗಿ ಬೇರೂರಿರುವ ಲಿಂಗ ಅಸಮಾನತೆಗಳು, ವಿದ್ಯಾರ್ಥಿಗಳಲ್ಲಿ ಆತಂಕ, ಹೆಚ್ಚಿದ ಶಾಲೆಯನ್ನು ಅರ್ಧಕ್ಕೆ ಬಿಡುವವರ ಪ್ರಮಾಣ ಮತ್ತು ಕಳಪೆ ಶೈಕ್ಷಣಿಕ ಪ್ರದರ್ಶನಕ್ಕೆ ಕಾರಣವಾಗುತ್ತಿವೆ. ಇವುಗಳಲ್ಲಿ ಪ್ರಮುಖವಾಗಿ ಹೆಣ್ಣುಮಕ್ಕಳು ಅಸಮಾನತೆಯೊಂದಿಗೆ  ಮನೆಗೆಲಸದ ಜವಾಬ್ದಾರಿಯನ್ನು ಹೊರಬೇಕಾದ ನಿರೀಕ್ಷೆ, ಹುಡುಗರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸದಂತೆ ನಿಷೇಧಿಸುವುದು ಮತ್ತು ಲಿಂಗತ್ವ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಎದುರಿಸುವ ಕಿರುಕುಳ ಹಾಗೂ ಅವರ ಲಿಂಗತ್ವ  ಗುರುತಿನ ತಪ್ಪಾದ ಉಲ್ಲೇಖಗಳು (Misgendering) ಸೇರಿವೆ.

[11] Express News Service. (2025, August 12). Karnataka SEP recommends sex education, RTE expansion. The New Indian Express.
[12] Vyas, A. (2025, November 18). Karnataka's new textbook takes on bullying, body shaming, and stereotypes. The Times of India

ಕರ್ನಾಟಕದಲ್ಲಿ 15-19 ವರ್ಷದ ಹದಿಹರೆಯದವರ ಒಟ್ಟಾರೆ ಗರ್ಭಧಾರಣೆಯ ದರವು 5.4% ರಷ್ಟಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಇದು 7.3% ಕ್ಕೆ ಏರುತ್ತದೆ.[13] ಇದು ರಾಷ್ಟ್ರೀಯ ಗ್ರಾಮೀಣ ಸರಾಸರಿಗಿಂತ (6.8%) ಹೆಚ್ಚಿದ್ದು, ಗಂಭೀರ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದೆ.[14] ಇಂತಹ ಗರ್ಭಧಾರಣೆಗಳು ತಾಯಿ ಮತ್ತು ನವಜಾತ ಶಿಶುಗಳಲ್ಲಿ ಆರೋಗ್ಯದ ತೊಂದರೆಗಳು, ಅಸುರಕ್ಷಿತ ಗರ್ಭಪಾತಗಳು, ಶಾಲೆಯನ್ನು ಬಿಡಲು, ಮತ್ತು ಸಾಮಾಜಿಕ ಕಳಂಕಕ್ಕೆ ದಾರಿ ಮಾಡಿಕೊಡುತ್ತವೆ.[15] ಹದಿಹರೆಯದ ತಾಯಂದಿರು ಶಾಲೆಯನ್ನು ಅರ್ಧಕ್ಕೆ ಬಿಡುವ, ಬಡತನವನ್ನು ಎದುರಿಸುವ ಮತ್ತು ಈ ಅನಾನುಕೂಲಗಳ ಹೊರೆಯನ್ನು ತಮ್ಮ ಮಕ್ಕಳಿಗೂ ವರ್ಗಾಯಿಸುವ ಸಾಧ್ಯತೆ ಹೆಚ್ಚಿರುತ್ತದೆ.[16] ಲೈಂಗಿಕ ಜಾಗೃತಿಯ ಕೊರತೆಯೇ ಈ ಬಿಕ್ಕಟ್ಟಿಗೆ ಪ್ರಮುಖ ಕಾರಣ ಎಂದು ಮುಖ್ಯಮಂತ್ರಿಗಳು ಗುರುತಿಸಿದ್ದು, ಈ ನಿಟ್ಟಿನಲ್ಲಿ ಏಳು ಇಲಾಖೆಗಳನ್ನು ಒಳಗೊಂಡ ಕೇಂದ್ರೀಯ ಕಾರ್ಯಪಡೆಯನ್ನು (Task force) ರಚಿಸಿದ್ದಾರೆ.[17]

## ಈಗಾಗಲೇ ತಾಯಂದಿರಾದ ಅಥವಾ ಗರ್ಭಿಣಿಯರಾದ 15-19 ವರ್ಷದೊಳಗಿನ ಮಹಿಳೆಯರು.




*NFHS-5 (2019-21)*

ಕರ್ನಾಟಕದ ಬಾಲ್ಯ ವಿವಾಹದ ಪ್ರಮಾಣವು **(18 ವರ್ಷ ತುಂಬುವ ಮೊದಲೇ ವಿವಾಹವಾಗಿರುವ 20-24 ವರ್ಷ ವಯಸ್ಸಿನ ಮಹಿಳೆಯರಲ್ಲಿ 21.3%)** ರಾಷ್ಟ್ರೀಯ ಸರಾಸರಿಗಿಂತ (23.3%) ಕಡಿಮೆಯಿದ್ದರೂ, ನಿರಂತರ ರಕ್ಷಣಾ ಕ್ರಮಗಳ ಅಗತ್ಯವಿದೆ.[18] ರಾಜ್ಯ ಶಿಕ್ಷಣ ನೀತಿಯು (SEP) 8 ರಿಂದ 12ನೇ ತರಗತಿಯವರೆಗೆ ಸಮಗ್ರ ಲೈಂಗಿಕ ಶಿಕ್ಷಣವನ್ನು (CSE) ಪ್ರಸ್ತಾಪಿಸಿದ್ದರೂ, ಪ್ರೌಢಾವಸ್ಥೆಯ ಬದಲಾವಣೆಗಳು ಮಕ್ಕಳಲ್ಲಿ 8 ವರ್ಷ ವಯಸ್ಸಾಗುತ್ತಿದ್ದಂತೆ ಆರಂಭವಾಗುವುದರಿಂದ ಪ್ರೌಢಾವಸ್ಥೆ ಮತ್ತು ಸಮ್ಮತಿಯ (Consent) ಬಗ್ಗೆ ಇನ್ನೂ ಮುಂಚಿತವಾಗಿಯೇ ಮಾಹಿತಿ ನೀಡುವುದು ಅಗತ್ಯವಾಗಿದೆ.[19] ಪ್ರಸ್ತುತ ಪಠ್ಯಕ್ರಮವು ಕೇವಲ ಮೂಲಭೂತ ಜೀವಶಾಸ್ತ್ರಕ್ಕೆ ಸೀಮಿತವಾಗಿದ್ದು, ಮುಟ್ಟಿನ ಆರೋಗ್ಯ, ಜನನಾಂಗದ ಆರೋಗ್ಯ, ದೇಹ ಚಿತ್ರಣ (Body image), ಸಮ್ಮತಿ ಮತ್ತು ಅಸುರಕ್ಷಿತ ಅಭ್ಯಾಸಗಳಂತಹ ಪ್ರಮುಖ ವಿಷಯಗಳನ್ನು ನಿರ್ಲಕ್ಷಿಸುತ್ತಿದೆ. ವಯಸ್ಸಿಗೆ ಅನುಗುಣವಾದ ಸಮಗ್ರ ಲೈಂಗಿಕ ಶಿಕ್ಷಣವನ್ನು ಆರಂಭಿಕ ಹಂತದಲ್ಲೇ ಅಳವಡಿಸಿಕೊಳ್ಳುವುದು, ತಪ್ಪು ಮಾಹಿತಿಯನ್ನು ತಡೆಗಟ್ಟಲು ಮತ್ತು ನೈಸರ್ಗಿಕ ದೈಹಿಕ ಬೆಳವಣಿಗೆಗಳ ಬಗ್ಗೆ ಯುವಜನರಲ್ಲಿ ಉಂಟಾಗುವ ಲಜ್ಜೆಯನ್ನು ಹೋಗಲಾಡಿಸಲು ಸಹಕಾರಿಯಾಗುತ್ತದೆ.[20]

ಜಾರ್ಖಂಡ್‌ನ 'ಉಡಾನ್' (UDAAN) ಉಪಕ್ರಮವು ಒಂದು ಪ್ರವರ್ತಕ ಮಾದರಿಯಾಗಿದ್ದು, ಹದಿಹರೆಯದವರಲ್ಲಿ ಲಿಂಗತ್ವ ಸಮತೆ ಮತ್ತು ಆರೋಗ್ಯ ಜಾಗೃತಿಯನ್ನು ಉತ್ತೇಜಿಸಲು ಶಾಲೆಗಳಲ್ಲಿ ಸಮಗ್ರ ಲೈಂಗಿಕ ಶಿಕ್ಷಣವನ್ನು ಹೇಗೆ ಯಶಸ್ವಿಯಾಗಿ ಅಳವಡಿಸಬಹುದು ಎಂಬುದನ್ನು ತೋರಿಸಿಕೊಟ್ಟಿದೆ.[21] ಕರ್ನಾಟಕ ಸರ್ಕಾರವು 2025-26ನೇ ಶೈಕ್ಷಣಿಕ ವರ್ಷದಲ್ಲಿ ಲಿಂಗತ್ವ ಸಮತೆ ಮತ್ತು ಸಂತಾನೋತ್ಪತ್ತಿ ಆರೋಗ್ಯ ಜಾಗೃತಿ ಕಾರ್ಯಕ್ರಮಗಳನ್ನು ವಿಸ್ತರಿಸಲು ಯೋಜಿಸಿದ್ದು, ಇದು ಹದಿಹರೆಯದವರಿಗೆ ಶಿಕ್ಷಣ ನೀಡಲು ಮತ್ತು ದೌರ್ಜನ್ಯ ತಡೆಗಟ್ಟುವ ಕ್ರಮಗಳನ್ನು ಉತ್ತೇಜಿಸಲು ಸಹಕಾರಿಯಾಗಲಿದೆ.[22]

[13] NFHS-5 (2019-21), Karnataka Health Department's Reproductive and Child Health (RCH) portal.
[14] National Family and Health Survey (NFHS) - 5
[15] World Health Organization. (n.d.). Maternal and reproductive health. Global Health Observatory (GHO)
[16] Bijapur, N. (2025, September 8). Teenage pregnancies in Karnataka: Despite strict laws, social malaise still remains. The New Indian Express.
[17] The Hindu Bureau. (2023, December 12). Govt. to set up a task force to prevent female foeticide. The Hindu.
[18] National Family and Health Survey (NFHS) - 5
[19] Cooper, J. M. S., & Tiwana, S. S. (2024). Child abuse and neglect. StatPearls Publishing.
[20] Khubchandani J, Clark J, Kumar R. (2014). Beyond controversies: sexuality education for adolescents in India. J Family Med Prim Care.
[21] Centre for Catalyzing Change (C3). (2019, September). UDAAN: Adolescence education program, Jharkhand: In school. At scale.
[22] Hindustan Times. (2025, January 30). Karnataka records over 33,600 teen pregnancies in 3 years: Bengaluru Urban tops report.

### ಮಕ್ಕಳ ಸುರಕ್ಷತೆಯ ಕುರಿತು ಹೆಚ್ಚುತ್ತಿರುವ ಆತಂಕಗಳು:

ಮಕ್ಕಳ ಲೈಂಗಿಕ ದೌರ್ಜನ್ಯವು (CSA) ಒಂದು ಪ್ರಮುಖ ಕಳವಳಕಾರಿಯಾದ ವಿಷಯವಾಗಿದ್ದು, ಕರ್ನಾಟಕದಲ್ಲಿ 2022 ರಿಂದ ಪೋಕ್ಸೊ (POCSO) ಪ್ರಕರಣಗಳಲ್ಲಿ 9% ಕ್ಕಿಂತ ಹೆಚ್ಚು ಏರಿಕೆ ಕಂಡುಬಂದಿದೆ. ಸ್ಮಾರ್ಟ್‌ಫೋನ್‌ಗಳ ಬಳಕೆ ವೇಗವಾಗಿ ಹೆಚ್ಚುತ್ತಿರುವ ಬೆನ್ನಲ್ಲೇ,[23] ಆನ್‌ಲೈನ್ ಮೂಲಕ ನಡೆಯುವ ಮಕ್ಕಳ ಲೈಂಗಿಕ ದೌರ್ಜನ್ಯದ ಪ್ರಕರಣಗಳೂ ಸಹ ಹೆಚ್ಚುತ್ತಿವೆ. ದಾಖಲಾದ ಪ್ರಕರಣಗಳಲ್ಲಿ ಕಂಡುಬರುತ್ತಿರುವ[24] ಈ ಆತಂಕಕಾರಿ ಪ್ರವೃತ್ತಿಯು ದೌರ್ಜನ್ಯ ತಡೆಗಟ್ಟುವ ಶಿಕ್ಷಣದ (Preventative education) ಅಗತ್ಯತೆಯನ್ನು ಒತ್ತಿಹೇಳುತ್ತದೆ.

**2022 ರಿಂದ ಪೋಕ್ಸೊ (POCSO) ಪ್ರಕರಣಗಳಲ್ಲಿ 9% ಕ್ಕಿಂತ ಹೆಚ್ಚು ಕಂಡುಬಂದಿದೆ.**




*Crime in India 2023, NCRB*

ಪೋಕ್ಸೊ ಕಾಯ್ದೆ ಮತ್ತು ಸಮಗ್ರ ಶಿಕ್ಷಣದಂತಹ ಯೋಜನೆಗಳು ಮಕ್ಕಳ ರಕ್ಷಣೆಗೆ ಕಾನೂನು ಮತ್ತು ಕಾರ್ಯಕ್ರಮದ ಚೌಕಟ್ಟನ್ನು ಒದಗಿಸುತ್ತವೆಯಾದರೂ, 1 ರಿಂದ 12ನೇ ತರಗತಿಯವರೆಗಿನ ಪಠ್ಯಕ್ರಮದಲ್ಲಿ ರಚನಾತ್ಮಕ ಮತ್ತು ವಯಸ್ಸಿಗೆ ಅನುಗುಣವಾದ 'ವೈಯಕ್ತಿಕ ಸುರಕ್ಷತಾ ಶಿಕ್ಷಣ'ವನ್ನು (Personal Safety Education - PSE) ಅಳವಡಿಸುವುದು ಅತ್ಯಗತ್ಯವಾಗಿದೆ. PSE ಮಕ್ಕಳಿಗೆ ತಮ್ಮ ದೇಹದ ಬಗ್ಗೆ ಸರಿಯಾದ ಪದಕೋಶ, ವ್ಯಕ್ತಿಗಳ ನಡುವಿನ ಸುರಕ್ಷಿತ ನಡವಳಿಕೆಯ ನಿಯಮಗಳು (ಸ್ಪರ್ಶ ಮತ್ತು ಸಂಭಾಷಣೆ), 'ಬೇಡ, ಹೋಗು, ಹೇಳು' ('ನೋ-ಗೋ-ಟೆಲ್', No-Go-Tell) ಮಾರ್ಗದರ್ಶಿ ಮತ್ತು 'ಸುರಕ್ಷಿತ ವಯಸ್ಕರು' (Safe adults) ಎಂಬ ಪರಿಕಲ್ಪನೆಗಳಂತಹ ಅಗತ್ಯ ವಿಷಯಗಳನ್ನು ಕಲಿಸುತ್ತದೆ. ಅನುಚಿತ ನಡವಳಿಕೆಯನ್ನು ಗುರುತಿಸಲು ಮತ್ತು ವರದಿ ಮಾಡಲು ಇವು ಬಹಳ ಮುಖ್ಯವಾಗಿವೆ.

ಕರ್ನಾಟಕ 'ರಾಜ್ಯ ಮಕ್ಕಳ ರಕ್ಷಣಾ ನೀತಿ'ಯು ಎಲ್ಲಾ ರೀತಿಯ ದೌರ್ಜನ್ಯಗಳನ್ನು ತಡೆಗಟ್ಟಲು, ಶಾಲೆಗಳೂ ಸೇರಿದಂತೆ ವಿವಿಧ ಸಂಸ್ಥೆಗಳ ಕರ್ತವ್ಯಗಳನ್ನು ನಿಗದಿಪಡಿಸಿದೆ. ಇದರಲ್ಲಿ ಸಿಬ್ಬಂದಿಗಳ ಹಿನ್ನೆಲೆ ಪರಿಶೀಲನೆ, ಸುರಕ್ಷಿತ ಮೂಲ ಸೌಕರ್ಯಗಳನ್ನು ಖಚಿತಪಡಿಸಿಕೊಳ್ಳುವುದು, ದೂರು ನೀಡುವ ವ್ಯವಸ್ಥೆಯನ್ನು ಕಲ್ಪಿಸುವುದು ಮತ್ತು ಹಾಸ್ಟೆಲ್ ಹಾಗೂ ವಸತಿ ಶಾಲೆಗಳಲ್ಲಿರುವ ಮಕ್ಕಳಿಗೆ ವಿಶೇಷ ರಕ್ಷಣೆ ನೀಡುವುದು ಸೇರಿವೆ.[25]

ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (KSCPCR) ಮತ್ತು ಚೈಲ್ಡ್‌ಫಂಡ್ ಇಂಡಿಯಾ 2024-25ರಲ್ಲಿ ನಡೆಸಿದ ರಾಜ್ಯ ಮಟ್ಟದ ಅಧ್ಯಯನವು ಆನ್‌ಲೈನ್ ಲೈಂಗಿಕ ಶೋಷಣೆ, ಮಕ್ಕಳನ್ನು ಮರಳು ಮಾಡುವುದು (ಗ್ರೂಮಿಂಗ್ Grooming), ಬ್ಲ್ಯಾಕ್‌ಮೇಲ್ ಮತ್ತು ಅಶ್ಲೀಲ ಚಿತ್ರಗಳ ಹಂಚಿಕೆ ಹೆಚ್ಚುತ್ತಿರುವುದನ್ನು ತೋರಿಸಿದೆ.[26] ವರದಿಯಾದ ಆನ್‌ಲೈನ್ ದೌರ್ಜನ್ಯದ ಗಣನೀಯ ಪಾಲು ಸಾಮಾಜಿಕ ಮಾಧ್ಯಮಗಳಿಗೆ ಸಂಬಂಧಿಸಿದೆ. ಸಾಮಾಜಿಕ ಮಾಧ್ಯಮಗಳು ಹದಿಹರೆಯದವರನ್ನು ಅನುಚಿತ ವಿಷಯಗಳಿಗೆ ಒಡ್ಡಿಕೊಳ್ಳುವಂತೆ ಮಾಡುತ್ತಿದ್ದು, ಇದು ಅವರ ಜೀವನದ ಆರಂಭಿಕ ಹಂತದಲ್ಲೇ ಅಪಾಯಕಾರಿ ನಡವಳಿಕೆಗಳಿಗೆ ಕಾರಣವಾಗುತ್ತಿದೆ ಎಂದು ಆಯೋಗದ ಅಧ್ಯಕ್ಷರು ಒತ್ತಿ ಹೇಳಿದ್ದಾರೆ.[27]

ಈ ಸವಾಲುಗಳನ್ನು ಎದುರಿಸಲು, KSCPCR ಮತ್ತು ChildFund India ಸೇರಿ "#WebSafeAndWise" ಮೊದಲಾದ ಅಭಿಯಾನಗಳನ್ನು ಆರಂಭಿಸಿ, ಮಕ್ಕಳ ಆನ್‌ಲೈನ್ ಲೈಂಗಿಕ ಶೋಷಣೆ ಮತ್ತು ದೌರ್ಜನ್ಯವನ್ನು ತಡೆಯುವ ಉದ್ದೇಶದಿಂದ ಕರ್ನಾಟಕದಲ್ಲಿ ಬಹು-ಭಾಗೀದಾರರ  ಸಮಾಲೋಚನೆಗಳನ್ನು ನಡೆಸಿವೆ. ಈ ಪ್ರಯತ್ನಗಳಲ್ಲಿ ಶಿಕ್ಷಣ, ಐಟಿ ಮತ್ತು ಪೊಲೀಸ್ ಇಲಾಖೆಗಳು,  ಮಕ್ಕಳು, ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಂತೆ ಭಾಗವಹಿಸಿದ್ದಾರೆ.[28]

---

[23] Crime in India 2023, NCRB
[24] Ibid
[25] Department of School Education and Literacy, Government of Karnataka. (2025). Karnataka Child Protection Policy.
[26] The APA 7th Edition citation for the news article is: Express News Service. (2025, June 14). More children falling prey to online sexual abuse in Karnataka. The New Indian Express.
[27] The Hindu Bureau. (2024, August 26). Most children suffer mental stress due to social media addiction, says KSCPCR chief. The Hindu.
[28] ChildFund. (2023, August 30). 3 takeaways from the first stakeholder meeting to prevent online sexual abuse in Karnataka State, India.

### ಸಹಪಾಠಿಗಳ ನಡುವಿನ ಹಿಂಸೆ ಮತ್ತು ದೈಹಿಕ ಶಿಕ್ಷೆಯ ಹೆಚ್ಚಳ:

ಕಾನೂನುಬದ್ಧ ನಿಷೇಧಗಳಿದ್ದರೂ ಸಹ, ಕರ್ನಾಟಕದ ಶಾಲೆಗಳು ಸಹಪಾಠಿಗಳ ನಡುವಿನ ಸಂಘರ್ಷ ಮತ್ತು ಹಿಂಸೆ, ಹಾಗೆಯೇ ಶಿಕ್ಷಕರಿಂದ ನಡೆಯುವ ದೈಹಿಕ ಶಿಕ್ಷೆಯ ಸಮಸ್ಯೆಗಳನ್ನು ಎದುರಿಸುತ್ತಿವೆ. ಕರ್ನಾಟಕ ಮಕ್ಕಳ ಹಕ್ಕುಗಳ ನಿಗಾ ಕೇಂದ್ರ (KCRO) ಪ್ರಕಟಿಸಿದ 2025ರ ವರದಿಯ ಪ್ರಕಾರ, ಕರ್ನಾಟಕದ 150 ಶಾಲೆಗಳಲ್ಲಿನ ಸಮೀಕ್ಷೆಗೆ ಒಳಪಟ್ಟ ವಿದ್ಯಾರ್ಥಿಗಳಲ್ಲಿ 38% ವಿದ್ಯಾರ್ಥಿಗಳು ದೈಹಿಕ ಶಿಕ್ಷೆಯನ್ನು (ಕಪಾಳಮೋಕ್ಷ, ಬೆತ್ತದಿಂದ ಹೊಡೆಯುವುದು, ಮೌಖಿಕ ನಿಂದನೆ  ಅಥವಾ ಸಾರ್ವಜನಿಕವಾಗಿ ಅವಮಾನಿಸುವುದು) ಅನುಭವಿಸಿದ್ದಾಗಿ ತಿಳಿಸಿದ್ದಾರೆ. ಗ್ರಾಮೀಣ ಶಾಲೆಗಳಲ್ಲಿ ಇದರ ಪ್ರಮಾಣ ವಿಶೇಷವಾಗಿ ಹೆಚ್ಚು ಕಂಡುಬಂದಿದ್ದು (45%), ನಗರ ಶಾಲೆಗಳಲ್ಲಿ ಇದು 32% ಆಗಿದೆ.[29]

**ಕರ್ನಾಟಕದ 150 ಶಾಲೆಗಳಲ್ಲಿನ ಸಮೀಕ್ಷೆಗೆ ಒಳಪಟ್ಟ ವಿದ್ಯಾರ್ಥಿಗಳಲ್ಲಿ 38% ವಿದ್ಯಾರ್ಥಿಗಳು ದೈಹಿಕ ಶಿಕ್ಷೆಯನ್ನು**



*Bangalore Education. (2023, November 23).*

ಈ ಸಮಸ್ಯೆಗಳು ಮಕ್ಕಳ ಸುರಕ್ಷತೆ, ಮಾನಸಿಕ ಆರೋಗ್ಯ ಮತ್ತು ಶೈಕ್ಷಣಿಕ ತೊಡಗಿಸಿಕೊಳ್ಳುವಿಕೆಗೆ (academic engagement) ಗಂಭೀರವಾದ ಹಾನಿಯನ್ನುಂಟುಮಾಡುತ್ತವೆ. ಪುನಃಶ್ಚೈತನ್ಯಕಾರಿ ದೃಷ್ಟಿಕೋನ (Restorative Approach – RA) ಶಿಕ್ಷಾತ್ಮಕ ಕ್ರಮಗಳಿಂದ ದೂರ ಸರಿದು, ಸಂಬಂಧಗಳ ಮರುಸ್ಥಾಪನೆ, ಹಂಚಿಕೊಂಡ ಹೊಣೆಗಾರಿಕೆ ಮತ್ತು ಸಹಾನುಭೂತಿಗೆ ಒತ್ತು ನೀಡುವ ಪರಿವರ್ತನಾತ್ಮಕ ಮಾರ್ಗವನ್ನು ಒದಗಿಸುತ್ತದೆ. ಇದು, **"ಯಾರಿಗೆ ಹಾನಿಯಾಗಿದೆ? ಅವರ ಅಗತ್ಯಗಳೇನು? ನಾವು ಒಟ್ಟಿಗೆ ಈ ಸ್ಥಿತಿಯನ್ನು ಹೇಗೆ ಸರಿಪಡಿಸಬಹುದು?"** ಎಂಬ ಪ್ರಶ್ನೆಗಳ ಮೂಲಕ ಸಮಸ್ಯೆಗಳನ್ನು ಎದುರಿಸುತ್ತದೆ.

ಸಮುದಾಯ ವೃತ್ತಗಳು (community circles) ಮತ್ತು ಸಂವಾದಗಳಂತಹ ಪುನಃಶ್ಚೈತನ್ಯಕಾರಿ ಅಭ್ಯಾಸಗಳು, ವಿದ್ಯಾರ್ಥಿಗಳು ತಮ್ಮ ಕ್ರಿಯೆಗಳ ಪರಿಣಾಮಗಳ ಬಗ್ಗೆ ಆತ್ಮಪರಿಶೀಲನೆ ಮಾಡಲು ಮತ್ತು ಸಹಾನುಭೂತಿಯನ್ನು ಬೆಳೆಸಿಕೊಳ್ಳಲು ಸಹಾಯ ಮಾಡುತ್ತವೆ. ಈ ವಿಧಾನವು ಭಾರತೀಯ ಸನ್ನಿವೇಶಗಳಲ್ಲಿ ಪರಿಣಾಮಕಾರಿಯೆಂದು ಸಾಬೀತಾಗಿದೆ. ಉದಾಹರಣೆಗೆ, ಬೆಂಗಳೂರು ಶಾಲೆಗಳಲ್ಲಿ ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್ ನಡೆಸಿದ ಕಾರ್ಯದಿಂದ, ಇನ್ನಿಸ್‌ಫ್ರೀ ಹೌಸ್ ಸ್ಕೂಲ್‌ನಲ್ಲಿ 77% ವಿದ್ಯಾರ್ಥಿಗಳು ತಮ್ಮ ಮಾತು ಕೇಳಲ್ಪಟ್ಟಿತು ಮತ್ತು ಗೌರವಿಸಲ್ಪಟ್ಟಿತು ಎಂದು ಅನುಭವಿಸಿದ್ದಾರೆ. ಸಾಂದೀಪಾನಿ ಅಕಾಡೆಮಿಯ ಶಿಕ್ಷಕರು ಸಹಪಾಠಿಗಳ ನಡುವಿನ ಸಂಘರ್ಷಗಳಲ್ಲಿ ಸ್ಪಷ್ಟ ಇಳಿಕೆಯನ್ನು ಗಮನಿಸಿದ್ದಾರೆ. ಮಹತ್ವದ ಸಂಗತಿ ಏನೆಂದರೆ,[30] ಕರ್ನಾಟಕ ಸರ್ಕಾರ ಈಗಾಗಲೇ ಶಿಕ್ಷಕರ ತರಬೇತಿ ಕಾರ್ಯಕ್ರಮಗಳಲ್ಲಿ ಪುನಃಶ್ಚೈತನ್ಯಕಾರಿ ಅಭ್ಯಾಸಗಳನ್ನು  ಪರಿಚಯಿಸಿದೆ. NEP 2020ರ ಸುರಕ್ಷಿತ ಮತ್ತು ಸಮಗ್ರ ಶಿಕ್ಷಣದ ದೃಷ್ಟಿಕೋನಕ್ಕೆ ಹೊಂದಿಕೊಂಡಂತೆ, ಈ ಸಂಪೂರ್ಣ ಶಾಲಾ ಮಟ್ಟದ ಪುನಃಶ್ಚೈತನ್ಯಕಾರಿ ಮಾದರಿಯನ್ನು ವಿಸ್ತರಿಸುವುದರಿಂದ ಭಯಾಧಾರಿತ ಶಿಸ್ತು ಕ್ರಮಗಳ ಬದಲು ನಂಬಿಕೆ ಮತ್ತು ಹಂಚಿಕೊಂಡ ಹೊಣೆಗಾರಿಕೆಯನ್ನು ಆಧಾರವಾಗಿಸಿಕೊಂಡ ಶಾಲಾ ಸಂಸ್ಕೃತಿಯನ್ನು ನಿರ್ಮಿಸಬಹುದು. ಇದರಿಂದ ಪ್ರತಿಯೊಬ್ಬ ಮಗು ಸುರಕ್ಷಿತ, ಮೌಲ್ಯಯುತ ಮತ್ತು ಕಲಿಯಲು ಸಿದ್ಧವಾಗಿರುವ ವಾತಾವರಣದಲ್ಲಿ ಬೆಳೆದುಬರಲು ಸಾಧ್ಯವಾಗುತ್ತದೆ.

> **"ವೃತ್ತವು (Circle) ನಮ್ಮ ತರಗತಿಯನ್ನು ಇನ್ನಷ್ಟು ಸಮೀಪಕ್ಕೆ ತಂದಿತು. ಅನೇಕರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು, ತಮ್ಮ ತಪ್ಪುಗಳನ್ನು ಅರ್ಥಮಾಡಿಕೊಳ್ಳಲು, ಒಂದು ಗುಂಪಾಗಿ ಬೆಳೆದು ಪರಸ್ಪರ ಬೆಂಬಲಿಸಲು ಇದು ಸಹಾಯ ಮಾಡಿತು,"**
>
> — ಬೆಂಗಳೂರು, ಇನ್ನಿಸ್‌ಫ್ರೀ ಹೌಸ್ ಸ್ಕೂಲ್‌ನ 7ನೇ ತರಗತಿಯ ವಿದ್ಯಾರ್ಥಿ

[29] Bangalore Education. (2023, November 23). Concerns over corporal punishment: Karnataka urged to enforce stricter measures and foster compassionate discipline.
[30] Ibid.

## ವಿದ್ಯಾರ್ಥಿಗಳ ಕ್ಷೇಮದ ಐದು ಸ್ತಂಭಗಳು

ಸಮಗ್ರ ಶೈಕ್ಷಣಿಕ ಪ್ರತಿಕ್ರಿಯೆಯಲ್ಲಿ ಲಿಂಗತ್ವ ಸಮತೆ ಮತ್ತು ಲೈಂಗಿಕತೆ ಶಿಕ್ಷಣವನ್ನು ಪುನಃಶ್ಚೈತನ್ಯ ಕಾರಿ ಅಭ್ಯಾಸಗಳ ಮೂಲಕ ಅಳವಡಿಸುವುದು ಅತ್ಯಂತ ಅಗತ್ಯ. ಈ ಅಂಶಗಳನ್ನು ಒಟ್ಟಾಗಿ, ಸಮನ್ವಿತ ವ್ಯವಸ್ಥೆಯಾಗಿ ಜಾರಿಗೊಳಿಸಿದಾಗ—ವಿಶೇಷವಾಗಿ ಕರ್ನಾಟಕದ ಮೌಲ್ಯ ಶಿಕ್ಷಣ ಪಠ್ಯಕ್ರಮದ ಜೊತೆಗೆ ಪೂರಕವಾಗಿ ಬಳಸಿದಾಗ—ಅವುಗಳ ಪರಿವರ್ತನಾತ್ಮಕ ಶಕ್ತಿ ಸ್ಪಷ್ಟವಾಗಿ ಕಾಣಿಸುತ್ತದೆ.

ಉದಾಹರಣೆಗೆ, ರಾಜ್ಯದ ಹೊಸ ಮೌಲ್ಯ ಶಿಕ್ಷಣದಲ್ಲಿ ಕಲಿಸಲ್ಪಡುವ ಸಾಮಾಜಿಕ–ಭಾವನಾತ್ಮಕ ಕಲಿಕೆ (SEL) ಸಾಮರ್ಥ್ಯಗಳನ್ನು ಲೈಂಗಿಕತೆ ಶಿಕ್ಷಣದೊಂದಿಗೆ ಸಂಯೋಜಿಸಿದಾಗ, ಮಕ್ಕಳಲ್ಲಿ ಸಹಾನುಭೂತಿ, ಇತರರ ಮೇಲಿನ ಗೌರವ, ಉತ್ತಮ ಸಂವಹನ, ಭಾವನೆಗಳನ್ನು ನಿರ್ವಹಿಸುವ ಸಾಮರ್ಥ್ಯ, ಧನಾತ್ಮಕ ಸ್ವ-ಚಿತ್ರ, ಸ್ವನಿಯಂತ್ರಣ ಮತ್ತು ಸುರಕ್ಷತೆಯ ಭಾವನೆ ಹೆಚ್ಚಾಗುತ್ತದೆ ಎಂದು ಸಂಶೋಧನೆಗಳು ತೋರಿಸಿವೆ. ಜೊತೆಗೆ, ಸಕಾರಾತ್ಮಕ ಸಂಬಂಧಗಳನ್ನು ಸ್ಥಾಪಿಸಿ ಕಾಪಾಡಿಕೊಳ್ಳುವ ಕೌಶಲ್ಯವೂ ವೃದ್ಧಿಸುತ್ತದೆ.[31]

ಪುನಃಶ್ಚೈತನ್ಯಕಾರಿ ಅಭ್ಯಾಸಗಳು ಐದು ಸಾಮಾಜಿಕ–ಭಾವನಾತ್ಮಕ ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಲು, ಅಭ್ಯಾಸ ಮಾಡಲು ಮತ್ತು ಬಲಪಡಿಸಲು ಅನೇಕ ಅವಕಾಶಗಳನ್ನು ಒದಗಿಸುತ್ತವೆ.[32] ಸಾಮಾಜಿಕ–ಭಾವನಾತ್ಮಕ ಕಲಿಕೆ, ವೈಯಕ್ತಿಕ ಸುರಕ್ಷತೆ, ಲಿಂಗ ಮತ್ತು ಲೈಂಗಿಕತೆ ಶಿಕ್ಷಣ ಹಾಗೂ ಡಿಜಿಟಲ್ ಸುರಕ್ಷತೆ ಸಂಬಂಧಿಸಿದ ಅಧಿವೇಶನಗಳಲ್ಲಿ ಪುನಃಶ್ಚೈತನ್ಯಕಾರಿ ನ್ಯಾಯದ ತತ್ವಗಳನ್ನು ಅಳವಡಿಸುವುದರಿಂದ, ಹೆಚ್ಚು ಸುರಕ್ಷಿತ ತರಗತಿ ವಾತಾವರಣ ನಿರ್ಮಾಣವಾಗುತ್ತದೆ, ಸಹಪಾಠಿಗಳ ಬೆಂಬಲ ಬಲಗೊಳ್ಳುತ್ತದೆ ಮತ್ತು ಪಠ್ಯಕ್ರಮದ[33] ಅನುಷ್ಠಾನವು ಜ್ಞಾನವಷ್ಟೇ ಅಲ್ಲದೆ ಮಕ್ಕಳ ಸಮಗ್ರ ಕಲ್ಯಾಣವನ್ನೂ ಉತ್ತೇಜಿಸುತ್ತದೆ. ಇದರೊಂದಿಗೆ ಹೊಣೆಗಾರಿಕೆ ಮತ್ತು ಜವಾಬ್ದಾರಿಯ ಸಂಸ್ಕೃತಿಯೂ ಬೆಳೆದುಬರುತ್ತದೆ.[34]

[31] Goldfarb, E. S., & Lieberman, L. D. (2021). Three decades of research: The case for comprehensive sex education. Journal of Adolescent Health, 68(1), 13-27.
[32] Restorative Practices and SEL Alignment. CASEL Guide to Schoolwide SEL 2020. (In collaboration with International Institute for Restorative Practices (IIRP)).
[33] EU Forum. (2021). Manual on Restorative Justice Values and Standards for Practice. European Forum for Restorative Justice
[34] Enfold Proactive Health Trust. Restorative Practices

# ಶಿಫಾರಸುಗಳು

ಕರ್ನಾಟಕ ಸರ್ಕಾರ ಹಾಗೂ ಅದರ **ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ (DSERT)** ರಾಜ್ಯದ ಶಿಕ್ಷಣ ಕ್ಷೇತ್ರದಲ್ಲಿ **ಮೌಲ್ಯ ಶಿಕ್ಷಣ ಮಾದರಿಯನ್ನು** ಪ್ರಾರಂಭಿಸಿರುವುದು ಒಂದು ಮಹತ್ವದ ಹಾಗೂ ಐತಿಹಾಸಿಕ ಹೆಜ್ಜೆಯೆಂದು ನಾವು ಗುರುತಿಸುತ್ತೇವೆ.[35] ಎಲ್ಲಾ ವಯೋಮಟ್ಟಗಳಲ್ಲೂ ವಯಸ್ಸಿಗೆ ತಕ್ಕಂತೆ ಬೋಧಿಸಲ್ಪಡುವ 10 ಮೂಲ ಮೌಲ್ಯಗಳ ಮೇಲೆ ಈ ಮಾದರಿಯ ಕೇಂದ್ರೀಕರಣ ಅತ್ಯಂತ ಶ್ಲಾಘನೀಯವಾಗಿದೆ. ಕೆಳಗಿನ ಕ್ರಮಗಳೊಂದಿಗೆ ಇದನ್ನು ಪೂರಕಗೊಳಿಸಿದರೆ, ಈ ಉಪಕ್ರಮ ಇನ್ನಷ್ಟು ಪರಿಣಾಮಕಾರಿಯಾಗಬಹುದು:




[35] Vyas, A. (2025, November 18). Karnataka's new textbook takes on bullying, body shaming, and stereotypes. The Times of India.

## ಲೈಂಗಿಕತೆ ಶಿಕ್ಷಣ CSE ಏಕೀಕರಣ (ತರಗತಿ 6–12)

1. **ತರಗತಿ 6–10:** ವಯಸ್ಸಿಗೆ ತಕ್ಕಂತೆ ರೂಪಿಸಿದ CSE ಮತ್ತು ಲಿಂಗ ಸಂಬಂಧಿತ ವಿಷಯಗಳನ್ನು ನವೀಕರಿಸಿ ಹಾಗೂ ಸೇರಿಸುವುದು (ಇವು ಸಂತಾನೋತ್ಪತ್ತಿ ಬೆಳವಣಿಗೆಯನ್ನು ಮೀರಿದ್ದು, ಪ್ರೌಢಾವಸ್ಥೆಯ ಭಾವನಾತ್ಮಕ, ಲೈಂಗಿಕ ಮತ್ತು ದೈಹಿಕ ಬೆಳವಣಿಗೆ, ಲಿಂಗಾಧಾರಿತ ಭೇದಭಾವ, ಲಿಂಗಾಧಾರಿತ ಹಿಂಸೆ ಮತ್ತು ಟ್ರಾನ್ಸ್‌ಜೆಂಡರ್ ಅನುಭವಗಳನ್ನು ಒಳಗೊಂಡಿರಬೇಕು) — ಇವುಗಳನ್ನು ಈಗಿರುವ ಪ್ರಮುಖ ವಿಷಯಗಳಲ್ಲಿ (ಉದಾ., ಜೀವಶಾಸ್ತ್ರ, ಸಮಾಜ ವಿಜ್ಞಾನ) ಅಳವಡಿಸಬೇಕು.
2. **ತರಗತಿ 11–12:** ಲಿಂಗ ಮತ್ತು ಸಮಗ್ರ ಲೈಂಗಿಕತೆ ಕುರಿತು ಪ್ರತ್ಯೇಕ, ಸಮರ್ಪಿತ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವುದು. ಇದರಲ್ಲಿ ಜವಾಬ್ದಾರಿಯುತ ಸಂತಾನೋತ್ಪತ್ತಿ ಮತ್ತು ಲೈಂಗಿಕ ಆರೋಗ್ಯ, ಸಮ್ಮತಿಯ ಸಂಕೀರ್ಣತೆಗಳು, ಲಿಂಗ ಗುರುತು, ವೈವಿಧ್ಯಮಯ ಸಂಬಂಧಗಳು ಮತ್ತು ಹದಿಹರೆಯದವರಿಗೆ ಜೀವನ ಕೌಶಲ್ಯಗಳಂತಹ ಪ್ರಮುಖ ವಿಷಯಗಳನ್ನು ಆಳವಾಗಿ ಒಳಗೊಂಡಿರಬೇಕು.[36]

   ಈ ಏಕೀಕರಣವು ರಾಜ್ಯ ಸರ್ಕಾರದ ಉಪಕ್ರಮಗಳಿಗೆ, ಟ್ರಾನ್ಸ್‌ಜೆಂಡರ್‌ಗಳನ್ನು ಒಳಗೊಂಡ CSEಗೆ ಆಗ್ರಹಿಸುವ ಸುಪ್ರೀಂ ಕೋರ್ಟ್ ತೀರ್ಪಿಗೆ ಹೊಂದಿಕೆಯಾಗಿದ್ದು, ಹದಿಹರೆಯದವರ ಆರೋಗ್ಯ ಶಿಕ್ಷಣಕ್ಕೆ ಸಂಬಂಧಿಸಿದ ಜಾಗತಿಕ ಉತ್ತಮ ಅಭ್ಯಾಸಗಳನ್ನು (ಉದಾ., UNESCO ದ ತಾಂತ್ರಿಕ ಮಾರ್ಗಸೂಚಿಗಳು) ಅನುಸರಿಸುತ್ತದೆ. ಜಾರ್ಖಂಡ್‌ನ **ಉಡಾನ್ (UDAAN)** ಯೋಜನೆ ಇಂತಹ ಏಕೀಕರಣಕ್ಕೆ ಮಾದರಿ ಅಧ್ಯಯನವಾಗಿ ಕಾಣಿಸುತ್ತದೆ.

## ಎಲ್ಲಾ ಶಾಲಾ ಕಾರ್ಯಪದ್ಧತಿಗಳಲ್ಲಿ ಪುನಃಸ್ಥಾಪನಾ ದೃಷ್ಟಿಕೋನ

ಈಗಿರುವ ಎಲ್ಲಾ ಕಾರ್ಯಕ್ರಮಗಳು, ಶಾಲಾ ಮಟ್ಟದ ನೀತಿಗಳು ಮತ್ತು ಶಿಸ್ತು ಕ್ರಮಗಳಲ್ಲಿ **ಪುನಃಶ್ಚೈತನ್ಯಕಾರಿ ನ್ಯಾಯ (Restorative Justice)** ದೃಷ್ಟಿಕೋನವನ್ನು ಅಳವಡಿಸಿ ಹಾಗೂ ಬೇರೂರಿಸುವುದು. ಇದರಲ್ಲಿ ಸಂಘರ್ಷ ಪರಿಹಾರ ಮತ್ತು ಸಮುದಾಯ ನಿರ್ಮಾಣಕ್ಕಾಗಿ ಪುನಃಶ್ಚೈತನ್ಯಕಾರಿ ಭಾಷೆಯನ್ನು ಬಳಸಲು ಮತ್ತು ಪುನಃಶ್ಚೈತನ್ಯಕಾರಿ ವೃತ್ತಗಳನ್ನು (restorative circles) ನಡೆಸಲು ಎಲ್ಲಾ ಸಿಬ್ಬಂದಿಗೆ ತರಬೇತಿ ನೀಡುವುದೂ ಸೇರಿದೆ.

**ಕಾರ್ಯಸಾಧ್ಯತೆ:** ಇದು ಕಾರ್ಯಕ್ರಮಾತ್ಮಕ ಮತ್ತು ಪಾಠಶಾಸ್ತ್ರೀಯ ಬದಲಾವಣೆಯಾಗಿದ್ದು, ಈಗಿರುವ ಸಂಪನ್ಮೂಲಗಳನ್ನು ಬಳಸಿಕೊಂಡು ಸಿಬ್ಬಂದಿ ವಿದ್ಯಾರ್ಥಿಗಳೊಂದಿಗೆ ಸಂವಹನ ಮಾಡುವ ರೀತಿಯನ್ನು ಬದಲಾಯಿಸುತ್ತದೆ. ಇದರಿಂದ ಶಿಸ್ತು ಸಂಬಂಧಿತ ಸಮಸ್ಯೆಗಳು ಕಡಿಮೆಯಾಗುತ್ತವೆ ಮತ್ತು ಹೆಚ್ಚು ಸುರಕ್ಷಿತ ಹಾಗೂ ಸಹಾಯಕ ಶಾಲಾ ವಾತಾವರಣ ನಿರ್ಮಾಣವಾಗುತ್ತದೆ.

## ಡಿಜಿಟಲ್ ಬೆಂಬಲಕ್ಕಾಗಿ ಚಾಟ್‌ಬಾಟ್ ಏಕೀಕರಣ

ರಾಜ್ಯದ ಆನ್‌ಲೈನ್ ಶೈಕ್ಷಣಿಕ ವೇದಿಕೆಗಳಲ್ಲಿ (ಉದಾ., ಮನ ಟಿವಿ (Mana TV), ಅಧಿಕೃತ ಪೋರ್ಟಲ್‌ಗಳು) ಸುರಕ್ಷಿತ, **ಎಐ (AI) ಆಧಾರಿತ ಚಾಟ್‌ಬಾಟ್** ಅನ್ನು ಏಕೀಕರಿಸುವುದು. ಮಕ್ಕಳು ಮತ್ತು ಹದಿಹರೆಯದವರು ದಿನನಿತ್ಯ ಡಿಜಿಟಲ್ ವಲಯಗಳೊಂದಿಗೆ ಹೆಚ್ಚಾಗಿ ತೊಡಗಿಸಿಕೊಂಡಿರುವುದರಿಂದ, ಈ ತೊಡಗಿಸಿಕೊಳ್ಳುವಿಕೆ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಒಂದು ಮಹತ್ವದ ಅವಕಾಶವನ್ನು ಒದಗಿಸುತ್ತದೆ. ಇದರ ಮೂಲಕ ಮಕ್ಕಳು ಮತ್ತು ಹದಿಹರೆಯದವರು **ಲಿಂಗ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ, ಮಾನಸಿಕ ಆರೋಗ್ಯ, ಸುರಕ್ಷತೆ ಹಾಗೂ ಡಿಜಿಟಲ್ ಅಪಾಯಗಳಿಗೆ** ಸಂಬಂಧಿಸಿದ ಚಿಂತನೆಗಳ ಬಗ್ಗೆ ವಯಸ್ಸಿಗೆ ತಕ್ಕ ಮತ್ತು ನಿಖರ ಮಾಹಿತಿಯನ್ನು, ಜೊತೆಗೆ ಪ್ರಾಥಮಿಕ ಬೆಂಬಲವನ್ನು ಪಡೆಯಲು ಸಾಧ್ಯವಾಗುತ್ತದೆ. ಈ ಸಾಧನವು ತರಬೇತಿ ಪಡೆದ ಸಮಾಲೋಚಕರ ಬೆಂಬಲದೊಂದಿಗೆ ಕಾರ್ಯನಿರ್ವಹಿಸಲಿದೆ ಮತ್ತು **ಅನಾಮಧೇಯ 24/7 ಟ್ರೈಯೇಜ್ ಆಧಾರಿತ ಬೆಂಬಲವನ್ನು** ಒದಗಿಸಿ, ಕರ್ನಾಟಕದಲ್ಲಿ ಈಗಾಗಲೇ ಇರುವ ಡಿಜಿಟಲ್ ಸುರಕ್ಷತಾ ಬೆಂಬಲ ಉಪಕ್ರಮಗಳಿಗೆ ನೇರ ರೆಫರಲ್ ಮಾರ್ಗಗಳನ್ನು ಕಲ್ಪಿಸುತ್ತದೆ.

**ಕಾರ್ಯಸಾಧ್ಯತೆ:** ಈಗಿರುವ ಡಿಜಿಟಲ್ ಮೂಲಸೌಕರ್ಯವನ್ನು ಉಪಯೋಗಿಸಿ, ವಿದ್ಯಾರ್ಥಿ ಬೆಂಬಲಕ್ಕೆ ವಿಸ್ತರಣೆಯಾದ, ಕಡಿಮೆ ಮುಜುಗರ ಅಥವಾ ಸಾಮಾಜಿಕ ಕಳಂಕವಿಲ್ಲದೆ (low-stigma) ಪ್ರವೇಶ ಬಿಂದುವನ್ನು ಒದಗಿಸುತ್ತದೆ.

[36] Centre for Catalyzing Change (C3). (2019, September). UDAAN: Adolescence education program, Jharkhand: In school. At scale.

## ಸಮಗ್ರ ಶಿಕ್ಷಕರ ತರಬೇತಿ

**ಎಲ್ಲಾ ಶಿಕ್ಷಕರು, ಶಾಲಾ ಮುಖ್ಯಸ್ಥರು ಹಾಗೂ ಬೋಧಕೇತರ ಸಿಬ್ಬಂದಿಗಾಗಿ (ತರಗತಿ 1–12) ವ್ಯವಸ್ಥಿತ ಮತ್ತು ಕಡ್ಡಾಯ ಶಿಕ್ಷಕರ ತರಬೇತಿಯಲ್ಲಿ ಹೂಡಿಕೆ ಮಾಡುವುದು.**

ಈ ತರಬೇತಿಯಲ್ಲಿ ಕೆಳಗಿನ ಅಂಶಗಳು ಒಳಗೊಂಡಿರಬೇಕು:

- ಸಮಗ್ರ ಲೈಂಗಿಕತೆ ಶಿಕ್ಷಣ (CSE) ಮತ್ತು ಲಿಂಗತ್ವ ಸಂಬಂಧಿತ ವಿಷಯಗಳ ಬಗ್ಗೆ ಜಾಗೃತಿ ಮತ್ತು ಸಂವೇದನಾಶೀಲತೆ ಬೆಳೆಸಲು.
- ಪುನಃಶ್ಚೈತನ್ಯಕಾರಿ ನ್ಯಾಯ (Restorative Justice) ಸೌಲಭ್ಯಗೊಳಿಸುವ ಕೌಶಲ್ಯಗಳು – ಶಿಸ್ತು ಹಾಗೂ ಭೇದಭಾವ ಸಂಬಂಧಿತ ಸಮಸ್ಯೆಗಳನ್ನು ಸಮರ್ಥವಾಗಿ ನಿರ್ವಹಿಸಲು.
- ತೀರ್ಪುರಹಿತ, ಸಮನ್ವಯದ  ತರಗತಿ ವಾತಾವರಣ ನಿರ್ಮಾಣ – ವಿಶೇಷವಾಗಿ ಲಿಂಗತ್ವ ವೈವಿಧ್ಯತೆ ಹೊಂದಿರುವ ಮತ್ತು ಅಂಗವೈಕಲ್ಯ ಹೊಂದಿರುವ ವಿದ್ಯಾರ್ಥಿಗಳಿಗಾಗಿ.
- POCSO ಕಾಯಿದೆಯಡಿಯಲ್ಲಿ ಕಡ್ಡಾಯ ವರದಿ ಪ್ರೋಟೋಕಾಲ್‌ಗಳು ಹಾಗೂ ಸುರಕ್ಷತಾ ಚಿಂತೆಗಳಿಗಾಗಿ ಸೂಕ್ತ ರೆಫರಲ್ ವ್ಯವಸ್ಥೆಗಳ ಅರಿವು.

ಈ ವ್ಯವಸ್ಥಾತ್ಮಕ ಶೈಕ್ಷಣಿಕ ಪರಿವರ್ತನೆಯು, NEP ನೀತಿ, POCSO ಕಾಯಿದೆ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಕಾಯಿದೆ, 2019 ಅಡಿಯಲ್ಲಿ ರಾಜ್ಯಕ್ಕೆ ಇರುವ ಕರ್ತವ್ಯಗಳನ್ನು ಪೂರೈಸಲು ನೆರವಾಗುತ್ತದೆ. ಜೊತೆಗೆ, ಸಂಬಂಧಿತ ಸುಪ್ರೀಂ ಕೋರ್ಟ್ ಮತ್ತು ಇತರ ಕಾನೂನು ಆದೇಶಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಾ, SDG 3 (ಆರೋಗ್ಯ), SDG 4 (ಗುಣಮಟ್ಟದ ಶಿಕ್ಷಣ) ಮತ್ತು SDG 5 (ಲಿಂಗತ್ವ ಸಮಾನತೆ) ಸಾಧನೆಗಳತ್ತ ರಾಜ್ಯದ ಪ್ರಗತಿಯನ್ನು ಮತ್ತಷ್ಟು ವೇಗಗೊಳಿಸುತ್ತದೆ.

### ಮಿತಿಗಳು ಮತ್ತು ವ್ಯಾಪ್ತಿ

ಈ ನೀತಿ ಸಂಕ್ಷಿಪ್ತವು ಕರ್ನಾಟಕ ಶಿಕ್ಷಣ ಇಲಾಖೆಯ ಸಾಂಸ್ಥಿಕ  ಆದೇಶಕ್ಕೆ ಮಾತ್ರ ಸೀಮಿತವಾಗಿದ್ದು (ಪಠ್ಯಕ್ರಮ, ತರಬೇತಿ, ಶಾಲಾ ನೀತಿಗಳು), ರಾಜ್ಯದ ಶಿಕ್ಷಣ ನೀತಿಯಲ್ಲಿ ಈಗಾಗಲೇ ಅಡಕವಾಗಿರುವ ಪ್ರಮುಖ ಉದ್ದೇಶಗಳನ್ನು ಕಾರ್ಯರೂಪಕ್ಕೆ ತರಲು ಉದ್ದೇಶಿಸಿದೆ. ಇದು ರಾಜ್ಯದ ಆರೋಗ್ಯ, ಸಮಾಜ ಕಲ್ಯಾಣ ಅಥವಾ ಪೊಲೀಸ್ ಕ್ಷೇತ್ರಗಳಲ್ಲಿ ಯಾವುದೇ ಬದಲಾವಣೆಗಳನ್ನು ಸೂಚಿಸುವುದಿಲ್ಲ.
ಮುಖ್ಯ ನಿರ್ಬಂಧವೆಂದರೆ, ಸಂವೇದನಶೀಲ ವಿಷಯಗಳನ್ನು ಬೋಧಿಸುವಲ್ಲಿ ಶಿಕ್ಷಕರ ಸಾಮರ್ಥ್ಯ ಮತ್ತು ಸಿದ್ಧತೆ. ಇದನ್ನು ಕಡ್ಡಾಯ, ಆಳವಾದ ತರಬೇತಿ ಹಾಗೂ ಪಾಠಶಾಸ್ತ್ರೀಯ ಬೆಂಬಲದ ಮೂಲಕ ಪರಿಹರಿಸಲು ಈ ರೂಪರೇಖೆ ಪ್ರಯತ್ನಿಸುತ್ತದೆ. ವಯಸ್ಸಿಗೆ ತಕ್ಕ ಲೈಂಗಿಕತೆ ಶಿಕ್ಷಣವನ್ನು ಪುನಃಶ್ಚೈತನ್ಯಕಾರಿ ಅಭ್ಯಾಸಗಳೊಂದಿಗೆ ಅಳವಡಿಸುವುದರಿಂದ, ಈ ಚೌಕಟ್ಟು ಪರೀಕ್ಷೆಗಳು ಮತ್ತು ಉದ್ಯೋಗ ಮಾರುಕಟ್ಟೆಗೆ ಮಾತ್ರವಲ್ಲದೆ, ಜೀವನದ ಸವಾಲುಗಳಿಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವಂತಹ ಶಿಕ್ಷಣ ವ್ಯವಸ್ಥೆಯನ್ನು ಸಾಕಾರಗೊಳಿಸಲು ಸಹಾಯ ಮಾಡುತ್ತದೆ.

# ಬದಲಾವಣೆಯ ಸಿದ್ಧಾಂತ

| ಸಮಸ್ಯೆ | ಹಸ್ತಕ್ಷೇಪ | ನಿರೀಕ್ಷಿತ ಫಲಿತಾಂಶ | ದೀರ್ಘಕಾಲೀನ ಪರಿಣಾಮ |
| --- | --- | --- | --- |
| ವಿಭಜಿತ ದೃಷ್ಟಿಕೋನ; ಸಂವೇದನಾಶೀಲ ವಿಷಯಗಳ ಬಗ್ಗೆ ಸಾಮಾಜಿಕ ಕಳಂಕ. | ಪಠ್ಯಕ್ರಮ ಏಕೀಕರಣ (5 ಸ್ತಂಭಗಳು) ಮತ್ತು ಶಿಕ್ಷಕರ ತರಬೇತಿ | ವಯಸ್ಸಿಗೆ ತಕ್ಕ, ನಿಖರ ಜ್ಞಾನ; ಮಕ್ಕಳಲ್ಲಿ ಸ್ವಯಂ-ಸಾಮರ್ಥ್ಯದ ಭಾವನೆ (self-efficacy) ಮತ್ತು ಪ್ರತಿರೋಧಶಕ್ತಿಯಲ್ಲಿ ವೃದ್ಧಿ. | ಹದಿಹರೆಯದ ಗರ್ಭಧಾರಣೆ ಮತ್ತು ಬಾಲ್ಯವಿವಾಹದಲ್ಲಿ ಇಳಿಕೆ; ಶೈಕ್ಷಣಿಕ ತೊಡಗಿಸಿಕೊಳ್ಳುವಿಕೆಯಲ್ಲಿ ಸುಧಾರಣೆ ಹಾಗೂ ಶಾಲೆಯನ್ನು ಅರ್ಧಕ್ಕೆ ಬಿಡುವವರ ಪ್ರಮಾಣದಲ್ಲಿ ಕಡಿತ. |
| ಶಿಕ್ಷಾತ್ಮಕ ಶಿಸ್ತು ಕ್ರಮಗಳು; ಕಿರುಕುಳ ಶಾಲಾ ಸಂಬಂಧಿತ ಲಿಂಗಾಧಾರಿತ ಹಿಂಸೆ – SRGBV ಹಾನಿಗೆ ಸಂಬಂಧಿಸಿದ ಹೊಣೆಗಾರಿಕೆಯ ಕೊರತೆ. | ಪುನಃಶ್ಚೈತನ್ಯಕಾರಿ ನ್ಯಾಯ ಆಧಾರಿತ ಪಾಠಶಾಸ್ತ್ರ | ಹೆಚ್ಚು ಸುರಕ್ಷಿತ ಶಾಲಾ ವಾತಾವರಣ; ಸಹಾನುಭೂತಿಯಲ್ಲಿ ವೃದ್ಧಿ; ವಿದ್ಯಾರ್ಥಿಗಳು ಹೊಣೆಗಾರಿಕೆಯನ್ನು ಸ್ವೀಕರಿಸಿ ಉಂಟಾದ ಹಾನಿಯನ್ನು ಸರಿಪಡಿಸುವುದನ್ನು ಕಲಿಯುತ್ತಾರೆ. | SRGBV ಪ್ರಕರಣಗಳಲ್ಲಿ ಇಳಿಕೆ; ಮಾನಸಿಕ ಆರೋಗ್ಯ ಸೂಚಕಗಳಲ್ಲಿ ಸುಧಾರಣೆ; ನಿಜವಾದ ಅರ್ಥದಲ್ಲಿ ಸಮನ್ವಯತೆಯ ಶಾಲಾ ವಾತಾವರಣಗಳ ನಿರ್ಮಾಣ. |
| ಲೈಂಗಿಕ ಹಿಂಸೆಗೆ ಸಂಬಂಧಿಸಿದ ಹೆಚ್ಚುತ್ತಿರುವ ಸೈಬರ್ ಅಪಾಯಗಳು; ಮಾನಸಿಕ ಆರೋಗ್ಯದ ತೊಂದರೆ. | ಡಿಜಿಟಲ್ ಕಲ್ಯಾಣ (Digital Well-being) ಮತ್ತು ಚಾಟ್‌ಬಾಟ್ ಏಕೀಕರಣ | ವಿದ್ಯಾರ್ಥಿಗಳು ಸುರಕ್ಷಿತ, ಪ್ರತಿರೋಧಶಕ್ತಿ ಹೊಂದಿದ ಡಿಜಿಟಲ್ ನಾಗರಿಕರಾಗುತ್ತಾರೆ; ತಕ್ಷಣದ, ಅನಾಮಧೇಯ ಬೆಂಬಲದ ಲಭ್ಯತೆ. | ಆನ್‌ಲೈನ್ ಮಕ್ಕಳನ್ನು ಮರಳು ಮಾಡುವುದು ಮತ್ತು ಲೈಂಗಿಕ ಹಿಂಸೆಯಲ್ಲಿ ಇಳಿಕೆ; ಬಲಿಷ್ಠ ಮನೋ-ಸಾಮಾಜಿಕ ಬೆಂಬಲ ಜಾಲದ ನಿರ್ಮಾಣ. |

# ಅನುಬಂಧ ಎ:
## ಸಂವಿಧಾನಾತ್ಮಕ ಮತ್ತು ಕಾನೂನು ಚೌಕಟ್ಟು (ಅಂತರರಾಷ್ಟ್ರೀಯ, ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ನೀತಿಗಳು)

| ಆದೇಶ | ವಿಧಾನ / ಕಲಂ | ಪ್ರಮುಖ ತತ್ವಗಳು | ಸಂಬಂಧಿತತೆ |
|---|---|---|---|
| ಸಂವಿಧಾನಾತ್ಮಕ | ವಿಧಿ 15(1) ಮತ್ತು 15(3) (ಭೇದಭಾವ ನಿಷೇಧ) | ಲಿಂಗಾಧಾರಿತ ಭೇದಭಾವವನ್ನು ನಿಷೇಧಿಸುತ್ತದೆ; ಮಹಿಳೆಯರು ಮತ್ತು ಮಕ್ಕಳಿಗೆ ವಿಶೇಷ ನಿಬಂಧನೆಗಳನ್ನು ಅನುಮತಿಸುತ್ತದೆ. | ಮಕ್ಕಳ ರಕ್ಷಣಾತ್ಮಕ ಮತ್ತು ಶೈಕ್ಷಣಿಕ ಕ್ರಮಗಳಿಗೆ ಬೆಂಬಲ ನೀಡುತ್ತದೆ. |
| | ವಿಧಿ 21 (ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು) | ಶಿಕ್ಷಣ, ಗೌರವ, ಗೌಪ್ಯತೆ, ದೈಹಿಕ ಸ್ವಾಯತ್ತತೆ ಹಾಗೂ ಲೈಂಗಿಕ ಹಿಂಸೆಯಿಂದ ಮುಕ್ತರಾಗಿರುವ ಹಕ್ಕುಗಳನ್ನು ಒಳಗೊಂಡಿದೆ. | ಶಿಕ್ಷಣ ಮತ್ತು ಲೈಂಗಿಕ ಕಲ್ಯಾಣಕ್ಕೆ ಸಂವಿಧಾನಾತ್ಮಕ ಹಕ್ಕಿನ ಅಡಿಷ್ಠಾನವನ್ನು ಒದಗಿಸುತ್ತದೆ; ಲೈಂಗಿಕ ಹಿಂಸೆಯನ್ನು ಜೀವನ ಹಕ್ಕಿನ ಉಲ್ಲಂಘನೆಯೆಂದು ಸ್ಥಾಪಿಸುತ್ತದೆ. |
| | ವಿಧಿ 19(1)(a) (ಮಾತು ಮತ್ತು ಅಭಿವ್ಯಕ್ತಿಯ ಸ್ವಾತಂತ್ರ್ಯ) | ತನ್ನ ಗುರುತನ್ನು ಅಭಿವ್ಯಕ್ತಪಡಿಸುವ ಹಾಗೂ ಮಾಹಿತಿಯಾ ಲಬ್ಯಹತೇ  ಪಡೆಯುವ ಹಕ್ಕಿಗೆ ಬೆಂಬಲ ನೀಡುತ್ತದೆ. | ಲಿಂಗತ್ವ ಗುರುತು ಮತ್ತು ಲೈಂಗಿಕ ಅಭಿರುಚಿಯನ್ನು ಅಭಿವ್ಯಕ್ತಪಡಿಸುವ ಹಕ್ಕನ್ನು, ಹಾಗೆಯೇ ಲೈಂಗಿಕತೆ ಮತ್ತು ಆರೋಗ್ಯ ಸಂಬಂಧಿತ ಮಾಹಿತಿ ಲಭ್ಯತೆ ಪಡೆಯುವ ಹಕ್ಕನ್ನು ಸಮರ್ಥಿಸುತ್ತದೆ. |
| | ವಿಧಿ 14 (ಕಾನೂನಿನ ಮುಂದೆ ಸಮಾನತೆ) | ಕಾನೂನಿನ ಮುಂದೆ ಸಮಾನ ರಕ್ಷಣೆ ದೊರಕುವುದನ್ನು ಖಾತರಿಪಡಿಸುತ್ತದೆ. | ಲಿಂಗಾಧಾರಿತ ಹಿಂಸೆಯನ್ನು ಎದುರಿಸುವುದು ಮತ್ತು ಹಿಂಸೆಗೊಳಗಾದವರಿಗೆ/ ಸಂತ್ರಸ್ಥರಿಗೆ ನ್ಯಾಯ ಒದಗಿಸಲು  ಅತ್ಯಂತ ಅಗತ್ಯವಾಗಿದೆ. |
| | ವಿಧಿ 39 (e), (f) (ರಾಜ್ಯ ನೀತಿಯ ನಿರ್ದೇಶಕ ತತ್ವಗಳು) | ಮಕ್ಕಳನ್ನು ದೌರ್ಜನ್ಯದಿಂದ ರಕ್ಷಿಸುವುದು ಮತ್ತು ಅವರ ಆರೋಗ್ಯಕರ ಬೆಳವಣಿಗೆಯನ್ನು ಖಚಿತಪಡಿಸುವಂತೆ ರಾಜ್ಯಕ್ಕೆ ನಿರ್ದೇಶನ ನೀಡುತ್ತದೆ. | ಮಕ್ಕಳ ರಕ್ಷಣೆಯನ್ನು ಒದಗಿಸುವುದು ಮತ್ತು ಅವರ ಸಮಗ್ರ ಹಾಗೂ ಆರೋಗ್ಯಕರ ಅಭಿವೃದ್ಧಿಯನ್ನು ಉತ್ತೇಜಿಸುವುದು ರಾಜ್ಯದ ಕರ್ತವ್ಯವೆಂದು ಸ್ಥಾಪಿಸುತ್ತದೆ. |
| | ವಿಧಿ 51A(e) ಮತ್ತು (h) (ಮೂಲಭೂತ ಕರ್ತವ್ಯಗಳು) | ಮಹಿಳೆಯರನ್ನು ಅವಮಾನಿಸುವ ಆಚರಣೆಗಳನ್ನು ತ್ಯಜಿಸಲು ಮತ್ತು ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳಲು ನಾಗರಿಕರನ್ನು ಪ್ರೋತ್ಸಾಹಿಸುತ್ತದೆ. | ಲಿಂಗತ್ವ ಮತ್ತು ಲೈಂಗಿಕತೆಯ ಕುರಿತು ಗೌರವಪೂರ್ಣ ಹಾಗೂ ವಿಚಾರಾಧಾರಿತ ಚಿಂತನೆಗಳ ಅಭಿವೃದ್ಧಿಗೆ ಉತ್ತೇಜನ ನೀಡುತ್ತದೆ. |
| ಅಂತರರಾಷ್ಟ್ರೀಯ | ಯುನೈಟೆಡ್ ನೇಷನ್ಸ್ ಅಂತರರಾಷ್ಟ್ರೀಯ ಜನಸಂಖ್ಯೆ ಮತ್ತು ಅಭಿವೃದ್ಧಿ ಸಮ್ಮೇಳನ (ICPD), 1994 | ಭಾರತವನ್ನು ಒಳಗೊಂಡಂತೆ ಸದಸ್ಯ ರಾಷ್ಟ್ರಗಳು ಹದಿಹರೆಯದವರ  ಲೈಂಗಿಕ ಮತ್ತು ಸಂತಾನೋತ್ಪತ್ತಿ ಹಕ್ಕುಗಳನ್ನು ದೃಢಪಡಿಸಿವೆ. | ಉಚಿತ ಮತ್ತು ಕಡ್ಡಾಯ ಸಮಗ್ರ ಲೈಂಗಿಕತೆ ಶಿಕ್ಷಣ (CSE) ಒದಗಿಸುವ ಜವಾಬ್ದಾರಿಯನ್ನು ಸರ್ಕಾರದ ಮೇಲೆ ವಿಧಿಸುತ್ತದೆ. |
| | ಯುನೈಟೆಡ್ ನೇಷನ್ಸ್ ಮಕ್ಕಳ ಹಕ್ಕುಗಳ ಕುರಿತ ಒಪ್ಪಂದ  1989 | ಮಕ್ಕಳ "ಉತ್ತಮ ಹಿತಾಸಕ್ತಿ"ಯನ್ನು ರಕ್ಷಿಸುವುದು ಹಾಗೂ ಲೈಂಗಿಕ ದೌರ್ಜನ್ಯ ಸೇರಿದಂತೆ ಎಲ್ಲಾ ರೀತಿಯ ಹಿಂಸೆಯಿಂದ ಅವರನ್ನು ಕಾಪಾಡುವುದು ರಾಜ್ಯಗಳ ಕರ್ತವ್ಯವೆಂದು ನಿರ್ಧರಿಸುತ್ತದೆ. | ಸಮಗ್ರ ಶಿಕ್ಷಣದ ಮೂಲಕ ಬೆಂಬಲಿತವಾಗಿರುವ, ಮಕ್ಕಳ ರಕ್ಷಣೆಗೆ ಸಂಬಂಧಿಸಿದ ಜಾಗತಿಕ ಕರ್ತವ್ಯವನ್ನು ಸ್ಥಾಪಿಸುತ್ತದೆ. |
| | ಭಾರತೀಯ ಸಂವಿಧಾನದ ವಿಧಿಗಳು 51(c), 253 ಮತ್ತು 73 ಹಾಗೂ ಅಂತರರಾಷ್ಟ್ರೀಯ ಕಾನೂನು | ಅಂತರರಾಷ್ಟ್ರೀಯ ಕಾನೂನನ್ನು ಗೌರವಿಸುವಂತೆ ಭಾರತವನ್ನು ನಿರ್ದೇಶಿಸುತ್ತದೆ ಮತ್ತು ಅಂತರರಾಷ್ಟ್ರೀಯ ಬದ್ಧತೆಗಳನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಕಾರ್ಯನಿರ್ವಹಣಾತ್ಮಕ ಕ್ರಮಗಳನ್ನು ಕೈಗೊಳ್ಳುವ ಅಧಿಕಾರವನ್ನು ನೀಡುತ್ತದೆ. | ಅಂತರರಾಷ್ಟ್ರೀಯ ಕರ್ತವ್ಯಗಳನ್ನು ಪೂರೈಸುವ ಉದ್ದೇಶಕ್ಕಾಗಿ ಭಾರತದ ಅರೆ-ಫೆಡರಲ್ (quasi-federal) ರಚನೆಯನ್ನು ಮೀರಿಸುವ ಶಕ್ತಿಯನ್ನು ಒದಗಿಸಿ, ಆರೋಗ್ಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ರಾಷ್ಟ್ರವ್ಯಾಪಿ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಸಾಧ್ಯವಾಗುವಂತೆ ಮಾಡುತ್ತದೆ. |

| ಆದೇಶ | ವಿಧಾನ / ಕಲಂ | ಪ್ರಮುಖ ತತ್ವಗಳು | ಸಂಬಂಧಿತತೆ |
| --- | --- | --- | --- |
| ರಾಷ್ಟ್ರೀಯ | ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು (RTE) ಕಾಯಿದೆ, 2009 – ವಿಧಿ 29 | ಭಯ, ಆಘಾತ ಮತ್ತು ಆತಂಕಗಳಿಂದ ಮುಕ್ತವಾದ ವಾತಾವರಣದಲ್ಲಿ ಮಗುವಿನ ಸಮಗ್ರ ಅಭಿವೃದ್ಧಿಯನ್ನು ಖಚಿತಪಡಿಸುವ ಪಠ್ಯಕ್ರಮವನ್ನು ಕಡ್ಡಾಯಗೊಳಿಸುತ್ತದೆ. | ಸುರಕ್ಷಿತ ಕಲಿಕಾ ವಾತಾವರಣವನ್ನು ಖಚಿತಪಡಿಸಲು ತಡೆಯುವಿಕೆಗೆ ಕೇಂದ್ರೀಕೃತ ಶಿಕ್ಷಣಕ್ಕೆ ಕಾನೂನುಬದ್ಧ ಮತ್ತು ಸಕ್ರಿಯ ಅಗತ್ಯವನ್ನು ನಿರ್ಮಿಸುತ್ತದೆ. |
| | ಮಕ್ಕಳ ಲೈಂಗಿಕ ಅಪರಾಧಗಳಿಂದ ರಕ್ಷಣೆ ಕಾಯಿದೆ (POCSO), 2012 | ಮಕ್ಕಳ ಲೈಂಗಿಕ ದೌರ್ಜನ್ಯವನ್ನು ವ್ಯಾಖ್ಯಾನಿಸುತ್ತದೆ ಮತ್ತು ಅಪರಾಧಗಳನ್ನು ಕಡ್ಡಾಯವಾಗಿ ವರದಿ ಮಾಡುವುದನ್ನು ನಿರ್ಧರಿಸುತ್ತದೆ. | ದೌರ್ಜನ್ಯ ಸಂಭವಿಸಿದ ನಂತರ ನ್ಯಾಯವನ್ನು ಒದಗಿಸಲು ಒಂದು ಕಾನೂನು ಚೌಕಟ್ಟನ್ನು ನೀಡುತ್ತದೆ; CSE / PSE ಮಕ್ಕಳು ಈ ವರದಿ ವ್ಯವಸ್ಥೆಗಳನ್ನು ಅರಿತುಕೊಂಡು ಬಳಸಿಕೊಳ್ಳಲು ಸಬಲೀಕರಿಸುತ್ತದೆ. |
| | ಶಾಲಾ ಆರೋಗ್ಯ ಮತ್ತು ಕಲ್ಯಾಣ ಕಾರ್ಯಕ್ರಮ | ನಿಯೋಜಿತ 'ಆರೋಗ್ಯ ಮತ್ತು ಕಲ್ಯಾಣ ರಾಯಭಾರಿಗಳ' ಮೂಲಕ ವಿದ್ಯಾರ್ಥಿಗಳ ದೈಹಿಕ ಮತ್ತು ಮಾನಸಿಕ ಆರೋಗ್ಯ, ಸಮಗ್ರ ಕಲ್ಯಾಣ ಮತ್ತು ಶೈಕ್ಷಣಿಕ ಫಲಿತಾಂಶಗಳನ್ನು ಉತ್ತೇಜಿಸುತ್ತದೆ. | ಭಾವನಾತ್ಮಕ ಕಲ್ಯಾಣ, ಲಿಂಗತ್ವ ಸಮಾನತೆ, ಮದ್ಯಪಾನ ಹಾಗೂ ಮಾದಕ ದ್ರವ್ಯ ಬಳಕೆ ತಡೆ, ಮತ್ತು ಸಂತಾನೋತ್ಪತ್ತಿ ಆರೋಗ್ಯದಂತಹ ವಿಷಯಗಳನ್ನು ಒಳಗೊಂಡಿದೆ. |
| | ರಾಷ್ಟ್ರೀಯ ಕಿಶೋರ ಸ್ವಾಸ್ಥ್ಯ ಕಾರ್ಯಕ್ರಮ | ಭಾರತದ ಮೊದಲ ಸಮಗ್ರ ಹದಿಹರೆಯದವರ ಆರೋಗ್ಯ ಕಾರ್ಯಕ್ರಮವಾಗಿದ್ದು, ಸಾಂಪ್ರದಾಯಿಕ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯದ ಗಡಿ ಮೀರಿಸಿ ಆರೋಗ್ಯ ಪ್ರೋತ್ಸಾಹನಾ ದೃಷ್ಟಿಕೋನವನ್ನು ಅಳವಡಿಸಿಕೊಂಡಿದೆ. | ಪೌಷ್ಟಿಕಾಂಶ, ಮಾನಸಿಕ ಆರೋಗ್ಯ, ಹಿಂಸೆ ಮತ್ತು ಮಾದಕ ವಸ್ತು ದುರುಪಯೋಗದಂತಹ ವಿಷಯಗಳನ್ನು ಪರಿಹರಿಸುವುದನ್ನು ಗುರಿಯಾಗಿಸಿಕೊಂಡಿದ್ದು, ಸಹಪಾಠಿ ಶಿಕ್ಷಣಕರು (peer educators) ಮತ್ತು ಆರೋಗ್ಯ ಕೇಂದ್ರಗಳ ಮೂಲಕ ಈ ಉದ್ದೇಶಗಳನ್ನು ಸಾಧಿಸಲು ಪ್ರಯತ್ನಿಸುತ್ತದೆ. |
| | ಬೇಟಿ ಬಚಾವೋ ಬೇಟಿ ಪಢಾವೋ (BBBP) ಯೋಜನೆ | ಮಕ್ಕಳ ಲಿಂಗಾನುಪಾತ (Child Sex Ratio – CSR) ಕುಸಿತವನ್ನು ಎದುರಿಸಿ, ಬಾಲಕಿಯರ ಶಿಕ್ಷಣ ಮತ್ತು ಸಬಲೀಕರಣವನ್ನು ಉತ್ತೇಜಿಸಲು ಕೈಗೊಂಡ ಮೂರು ಸಚಿವಾಲಯಗಳ ಸಂಯುಕ್ತ ಉಪಕ್ರಮವಾಗಿದೆ. | ಜನನ ಸಮಯದ ಲಿಂಗಾನುಪಾತವನ್ನು (Sex Ratio at Birth – SRB) ಸುಧಾರಿಸುವುದು ಮತ್ತು ಬಾಲಕಿಯರ ಪ್ರೌಢ ಶಿಕ್ಷಣದಲ್ಲಿ ದಾಖಲಾತಿಯನ್ನು ಹೆಚ್ಚಿಸುವುದನ್ನು ಗುರಿಯಾಗಿಟ್ಟುಕೊಂಡಿದೆ. |
| | ಮಿಷನ್ ಶಕ್ತಿ | ಮಹಿಳೆಯರ ಸಮಗ್ರ ಸಬಲೀಕರಣವನ್ನು ಸಾಧಿಸುವುದಕ್ಕೂ, ಅವರ ಸುರಕ್ಷತೆ, ಭದ್ರತೆ ಮತ್ತು ಗೌರವವನ್ನು ಕಾಪಾಡುವುದಕ್ಕೂ ಉದ್ದೇಶಿಸಿದ, ವಿವಿಧ ಇಲಾಖೆಗಳ ಸಂಯೋಜನೆಯ ಮೇಲೆ ಆಧಾರಿತ ಸಮಗ್ರ ಮಿಷನ್ ಆಗಿದೆ. | ಒನ್-ಸ್ಟಾಪ್ ಕೇಂದ್ರಗಳು, ಸಹಾಯವಾಣಿ (ಹೆಲ್ಪ್‌ಲೈನ್‌ಗಳು) ಮೊದಲಾದ ಸುರಕ್ಷತಾ ಅಂಶಗಳ ಜೊತೆಗೆ, ಕೌಶಲ್ಯಾಭಿವೃದ್ಧಿ ಮತ್ತು ಆರ್ಥಿಕ ಒಳಗೊಳ್ಳುವಿಕೆಯಂತಹ ಸಬಲೀಕರಣ ಉಪಕ್ರಮಗಳನ್ನು ಸಹ ಏಕೀಕರಿಸುತ್ತದೆ. |
| | ಮಿಷನ್ ವಾತ್ಸಲ್ಯ | ಅಪಾಯಕರ ಮತ್ತು ದುರ್ಬಲ ಪರಿಸ್ಥಿತಿಗಳಲ್ಲಿರುವ ಮಕ್ಕಳಿಗೆ ಸಮಗ್ರ ಆರೈಕೆ, ರಕ್ಷಣೆ ಮತ್ತು ಪುನರ್ವಸತಿ ಒದಗಿಸುವುದನ್ನು ಗುರಿಯಾಗಿಟ್ಟುಕೊಂಡಿದ್ದು, ಕುಟುಂಬಾಧಾರಿತ ಆರೈಕೆಗೆ ಆದ್ಯತೆ ನೀಡುತ್ತದೆ. | POCSO ಕಾಯಿದೆಗೆ ಹೊಂದಿಕೊಂಡಂತೆ ಕಾರ್ಯನಿರ್ವಹಿಸಿ, ಸಾಂಸ್ಥಿಕ ಆರೈಕೆ, ತುರ್ತು ಸೇವೆಗಳು, ಸಾಮರ್ಥ್ಯ ವೃದ್ಧಿ (capacity building) ಮತ್ತು ಸಮುದಾಯ ಭಾಗವಹಿಸುವಿಕೆಗೆ ಗಮನ ನೀಡುತ್ತದೆ. |
| | ಮಕ್ಕಳ ಸಹಾಯವಾಣಿ 1098 | ಭಾರತದ ಮೊದಲ 24 ಗಂಟೆಗಳ ಉಚಿತ ದೂರವಾಣಿ ತುರ್ತು ಸೇವೆ, ಸಂಕಷ್ಟದಲ್ಲಿರುವ ಮಕ್ಕಳಿಗಾಗಿ ಕಾರ್ಯನಿರ್ವಹಿಸುತ್ತಿದ್ದು ಮಿಷನ್ ವಾತ್ಸಲ್ಯದೊಂದಿಗೆ ಏಕೀಕೃತವಾಗಿದೆ. | ತುರ್ತು ಪ್ರತಿಕ್ರಿಯೆ, ರಕ್ಷಣಾ ಕಾರ್ಯಾಚರಣೆಗಳನ್ನು ಒದಗಿಸುವುದರ ಜೊತೆಗೆ, ಮಕ್ಕಳನ್ನು ಅಗತ್ಯ ಆರೈಕೆ, ಕಾನೂನು ಸಹಾಯ ಮತ್ತು ಸಮಾಲೋಚನಾ ಸೇವೆಗಳೊಂದಿಗೆ ಸಂಪರ್ಕಿಸುತ್ತದೆ. |

| ಆದೇಶ | ವಿಧಾನ / ಕಲಂ | ಪ್ರಮುಖ ತತ್ವಗಳು | ಸಂಬಂಧಿತತೆ |
|---|---|---|---|
| ರಾಷ್ಟ್ರೀಯ | ಕಿಶೋರಿಯರಿಗಾಗಿ ಯೋಜನೆ (Scheme for Adolescent Girls – SAG) / ಸಬ್ಲಾ ಯೋಜನೆ | ಕಿಶೋರಿಯರ ಪೌಷ್ಟಿಕಾಂಶ ಮತ್ತು ಆರೋಗ್ಯ ಮಟ್ಟಗಳನ್ನು ಸುಧಾರಿಸುವುದು ಹಾಗೂ ಅವರಿಗೆ ಅಗತ್ಯವಾದ ಜೀವನ ಕೌಶಲ್ಯಗಳನ್ನು ಕಲಿಸುವುದನ್ನು ಉದ್ದೇಶಿಸಿದೆ. | ಶಾಲೆಗೆ ಹೋಗದಿರುವ ಕಿಶೋರಿಯರಿಗೆ ವಿಶೇಷ ಗಮನ ನೀಡಿ, ಪೂರಕ ಪೌಷ್ಟಿಕ ಆಹಾರ, ಆರೋಗ್ಯ ತಪಾಸಣೆ, ಜೀವನ ಕೌಶಲ್ಯ ತರಬೇತಿ ಮತ್ತು ವೃತ್ತಿಪರ ಕೌಶಲ್ಯ ತರಬೇತಿಗಳನ್ನು ಒದಗಿಸುತ್ತದೆ. |
| | ಕಿಶೋರಿ ಶಕ್ತಿ ಯೋಜನೆ (Kishori Shakti Yojana – KSY) | ಪೌಷ್ಟಿಕಾಂಶ ಮತ್ತು ಲಿಂಗ ಸಂಬಂಧಿತ ಹಿಂದುಳಿತಗಳನ್ನು ಎದುರಿಸುವುದರ ಮೂಲಕ ಕಿಶೋರಿಯರನ್ನು ಸಬಲೀಕರಿಸುವುದನ್ನು ಗುರಿಯಾಗಿಟ್ಟುಕೊಂಡಿದ್ದು, ಕೌಶಲ್ಯಾಭಿವೃದ್ಧಿಗೆ ವಿಶೇಷ ಒತ್ತು ನೀಡುತ್ತದೆ. | ಕಿಶೋರಿಯರಲ್ಲಿ ಆರೋಗ್ಯ ಜಾಗೃತಿ, ಸ್ವಚ್ಛತೆ ಅರಿವು ಮತ್ತು ವೃತ್ತಿಪರ ಕೌಶಲ್ಯ ತರಬೇತಿಯನ್ನು ಉತ್ತೇಜಿಸುತ್ತದೆ. |
| | ರಾಷ್ಟ್ರೀಯ ಆರೋಗ್ಯ ನೀತಿ, 2017 | ಹದಿಹರೆಯದವರ ಆರೋಗ್ಯ, ಶಾಲಾ ಆರೋಗ್ಯ ಕಾರ್ಯಕ್ರಮಗಳು ಮತ್ತು ಮಾನಸಿಕ ಆರೋಗ್ಯಕ್ಕೆ ವಿಶೇಷ ಮಹತ್ವ ನೀಡುತ್ತದೆ. | ಶಾಲಾ ಆರೋಗ್ಯ ಕಾರ್ಯಕ್ರಮಗಳನ್ನು ಬಲಪಡಿಸುವುದು ಹಾಗೂ ಆರೋಗ್ಯ ಮತ್ತು ಸ್ವಚ್ಛತೆಯನ್ನು ಶಾಲಾ ಪಠ್ಯಕ್ರಮದಲ್ಲಿ ಏಕೀಕರಿಸುವುದನ್ನು ಒತ್ತಿ ಹೇಳುತ್ತದೆ. ತಂತ್ರಜ್ಞಾನ ದುರುಪಯೋಗಕ್ಕೆ ಸಂಬಂಧಿಸಿದ ಮನೋವೈಜ್ಞಾನಿಕ ಸಮಸ್ಯೆಗಳನ್ನೂ ಈ ನೀತಿ ಉಲ್ಲೇಖಿಸುತ್ತಿದ್ದು, ಹದಿಹರೆಯದವರ ಮೇಲೆ ಪರಿಣಾಮ ಬೀರುವ ಸಮಕಾಲೀನ ಸವಾಲುಗಳ ಬಗ್ಗೆ ನೀತಿಯ ಅರಿವನ್ನು ಪ್ರತಿಬಿಂಬಿಸುತ್ತದೆ. |
| | ರಾಷ್ಟ್ರೀಯ ಏಡ್ಸ್ ನಿಯಂತ್ರಣ ಕಾರ್ಯಕ್ರಮ (National AIDS Control Programme – NACP) | ಎಚ್‌ಐವಿ/ಏಡ್ಸ್ ತಡೆಗಟ್ಟುವಿಕೆ ಮತ್ತು ಲೈಂಗಿಕ ಆರೋಗ್ಯ ಕುರಿತು ಹದಿಹರೆಯದವರಿಗೆ ಶಿಕ್ಷಣ ನೀಡುತ್ತದೆ. | ಎಚ್‌ಐವಿ ಹರಡುವಿಕೆಯನ್ನು ತಡೆಯಲು ವರ್ತನೆ ಬದಲಾವಣೆ, ಗುರಿಯಾಧಾರಿತ ಹಸ್ತಕ್ಷೇಪಗಳು ಮತ್ತು ಕಳಂಕವನ್ನು ಕಡಿಮೆ ಮಾಡುವುದರ (stigma) ಮೇಲೆ ಕೇಂದ್ರೀಕರಿಸುತ್ತದೆ. |
| | ರಾಣಿ ಲಕ್ಷ್ಮೀಬಾಯಿ ಆತ್ಮರಕ್ಷಾ ಪ್ರಶಿಕ್ಷಣ (2023) | ಇದು ಎಲ್ಲಾ ವಿದ್ಯಾರ್ಥಿನಿಯರನ್ನು ಆತ್ಮರಕ್ಷಣೆ ಕೌಶಲ್ಯಗಳೊಂದಿಗೆ ಸಬಲೀಕರಿಸುವ ಗುರಿಯನ್ನು ಹೊಂದಿದೆ. | ವೈಯಕ್ತಿಕ ರಕ್ಷಣೆ ಮತ್ತು ಜಾಗೃತಿಗಾಗಿ ಜೂಡೋ ಮತ್ತು ಕರಾಟೆಯಂತಹ ಸಮರ ಕಲೆಗಳಲ್ಲಿ ತರಬೇತಿಯನ್ನು ಇದು ನೀಡುತ್ತದೆ. |
| | ರಾಷ್ಟ್ರೀಯ ಶಿಕ್ಷಣ ನೀತಿ, 2020 (National Education Policy – NEP 2020) | ಸಮಗ್ರ ಅಭಿವೃದ್ಧಿಯನ್ನು ಸಾಧಿಸಲು ನಮ್ಯ ಮತ್ತು ಬಹುವಿದ್ಯಾಶಾಖೀಯ ಪಠ್ಯಕ್ರಮವನ್ನು ಉತ್ತೇಜಿಸುತ್ತದೆ. | ಶಿಕ್ಷಣದಲ್ಲಿ ಲಿಂಗತ್ವ ಸಮಾನತೆಯನ್ನು ಸಾಧಿಸಲು ಲಿಂಗವನ್ನು ಅಡ್ಡಹಾದಿ ಆದ್ಯತೆಯಾಗಿ (cross-cutting priority) ಪರಿಗಣಿಸುವಂತೆ NEP ಮಾರ್ಗದರ್ಶನ ನೀಡುತ್ತದೆ. ಈ ಉದ್ದೇಶಕ್ಕಾಗಿ ರಾಜ್ಯಗಳು ಮತ್ತು ಸ್ಥಳೀಯ ಸಮುದಾಯ ಸಂಸ್ಥೆಗಳ ಸಹಭಾಗಿತ್ವಕ್ಕೆ ಒತ್ತು ನೀಡುತ್ತದೆ.<br><br>ಇದಲ್ಲದೆ, ಎಲ್ಲಾ ಬಾಲಕಿಯರು ಹಾಗೂ ಟ್ರಾನ್ಸ್‌ಜೆಂಡರ್ ವಿದ್ಯಾರ್ಥಿಗಳಿಗೆ ಸಮಚಿತ್ತ ಮತ್ತು ಗುಣಮಟ್ಟದ ಶಿಕ್ಷಣ ಒದಗಿಸುವ ರಾಷ್ಟ್ರದ ಸಾಮರ್ಥ್ಯವನ್ನು ಬಲಪಡಿಸಲು, ವಿಶೇಷವಾಗಿ ಬಾಲಕಿಯರು ಮತ್ತು ಟ್ರಾನ್ಸ್‌ಜೆಂಡರ್ ವಿದ್ಯಾರ್ಥಿಗಳಿಗಾಗಿ ಲಿಂಗ ಒಳಗೊಳ್ಳುವಿಕೆ ನಿಧಿ (Gender Inclusion Fund – GIF) ಸ್ಥಾಪನೆಗೆ ನೀತಿ ಅವಕಾಶ ಒದಗಿಸಿದೆ. |

| ಆದೇಶ | ವಿಧಾನ / ಕಲಂ | ಪ್ರಮುಖ ತತ್ವಗಳು | ಸಂಬಂಧಿತತೆ |
|---|---|---|---|
| ಕರ್ನಾಟಕ ರಾಜ್ಯ | ಕಲಿಕಾ ಚೇತರಿಕೆ (Kalika Chetarike) – ಕಲಿಕಾ ಚೇತರಿಕೆ  ಕಾರ್ಯಕ್ರಮ | ಚಟುವಟಿಕೆ ಆಧಾರಿತ ಕಲಿಕೆ (Activity-Based Learning) ಮೂಲಕ, ಸಾಂಕ್ರಾಮಿಕ ರೋಗದಿಂದ (pandemic) ಉಂಟಾದ ಕಲಿಕಾ ಅಂತರಗಳನ್ನು "ಸಂತೋಷಕರ ಕಲಿಕೆ (joyful learning)" ಘಟಕಗಳ ಮೂಲಕ ತುಂಬುವ ಉದ್ದೇಶ ಹೊಂದಿದೆ. | ಮಕ್ಕಳನ್ನು ಅವರ ಪ್ರಸ್ತುತ ಕಲಿಕಾ ಹಂತದಲ್ಲೇ ಭೇಟಿಯಾಗುವ ಮೂಲಕ ಆತಂಕವನ್ನು ಕಡಿಮೆ ಮಾಡುವುದು—ತರಗತಿ ಮಟ್ಟದ ಒತ್ತಡಕ್ಕಿಂತ ಕಲಿಕೆಯ ಅರ್ಥಗ್ರಹಣ ಮತ್ತು ಕೌಶಲ್ಯ ಗಳಿಕೆಗೆ ಆದ್ಯತೆ ನೀಡುವುದು; ಪಠ್ಯಕ್ರಮ ಪೂರ್ಣಗೊಳಿಸುವುದಕ್ಕಿಂತ ಕಲಿಕೆ ಗುಣಮಟ್ಟವನ್ನು ಕೇಂದ್ರದಲ್ಲಿರಿಸುವುದು. |
| | ಡಿಜಿಟಲ್ ನಾಗರಿಕ ಕಾರ್ಯಕ್ರಮ (Digital Nagarik Programme) | ಸೈಬರ್ ಸುರಕ್ಷತಾ ಪಠ್ಯಕ್ರಮ: ತರಗತಿ 6–10ರ ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗಾಗಿ ಇಂಟರ್ನೆಟ್ ಸುರಕ್ಷತೆ, ಸೈಬರ್ ಬುಲ್ಲಿಯಿಂಗ್ ಮತ್ತು ಡಿಜಿಟಲ್ ಶಿಷ್ಟಾಚಾರ ಕುರಿತ ತರಬೇತಿ. ಸಹಭಾಗಿತ್ವ: ಮೆಟಾ (ಫೇಸ್‌ಬುಕ್) ಮತ್ತು DSERT ಜೊತೆಗೆ ಸಹಕಾರದಲ್ಲಿ "ಡಿಜಿಟಲ್ ನಾಗರಿಕ" ಟೂಲ್‌ಕಿಟ್ ಅಭಿವೃದ್ಧಿ. | ವಿದ್ಯಾರ್ಥಿಗಳನ್ನು ತಂತ್ರಜ್ಞಾನವನ್ನು ಸುರಕ್ಷಿತವಾಗಿ, ಗೌರವಪೂರ್ಣವಾಗಿ ಮತ್ತು ವಿಮರ್ಶಾತ್ಮಕವಾಗಿ ಬಳಸುವ ನಾಗರಿಕರಾಗಿ ರೂಪಿಸುವುದು. ಆನ್‌ಲೈನ್ ಹಾನಿ ತಡೆ: ಫಿಷಿಂಗ್, ಮಕ್ಕಳನ್ನು ಮರಳು ಮಾಡುವುದು  ಮತ್ತು ವ್ಯಸನದ  ಅಪಾಯಗಳನ್ನು ಕಡಿಮೆ ಮಾಡುವುದು. |
| | ಮನೋಚೈತನ್ಯ (Manochaitanya) ಮತ್ತು ಟೆಲಿ–ಮಾನಸ್ (Tele-MANAS) | "ಸೂಪರ್ ಟ್ಯೂಸ್ಡೇ" ಕ್ಲಿನಿಕ್‌ಗಳು: ಪ್ರತಿ ಮಂಗಳವಾರ ತಾಲ್ಲೂಕು ಆಸ್ಪತ್ರೆಗಳಲ್ಲಿ ಮಾನಸಿಕ ಆರೋಗ್ಯ ಸಲಹೆಗಳು ಲಭ್ಯ. ಟೆಲಿ–ಸಮಾಲೋಚನೆ: 24/7 ಮಾನಸಿಕ ಆರೋಗ್ಯ ಬೆಂಬಲಕ್ಕಾಗಿ ಟೆಲಿ–ಮಾನಸ್ ಸಹಾಯವಾಣಿ (14416) ಗೆ ಪ್ರವೇಶ. ಹದಿಹರೆಯದವರ  ಸ್ವಾವಲಂಬನ: ಹದಿಹರೆಯದವರ ಭಾಗವಹಿಸುವಿಕೆಯನ್ನು ಉತ್ತೇಜಿಸುವ ಉಪಕ್ರಮ. | ಮಾನಸಿಕ ಆರೋಗ್ಯ ಆರೈಕೆಯನ್ನು ಪ್ರಾಥಮಿಕ ಆರೋಗ್ಯ ಸೇವೆಗಳೊಂದಿಗೆ ಏಕೀಕರಿಸಲಾಗಿದ್ದು, ಅದನ್ನು ಪ್ರತ್ಯೇಕ ಕ್ಷೇತ್ರವಾಗಿ ನೋಡುವುದಿಲ್ಲ. ಮಾನಸಿಕ ಆರೋಗ್ಯ ಬೆಂಬಲ ಪಡೆಯುವಲ್ಲಿ ಇರುವ ಸಾಮಾಜಿಕ ಕಳಂಕವನ್ನು  (stigma) ಮತ್ತು ವ್ಯವಸ್ಥಿತ  ಅಡೆತಡೆಗಳನ್ನು ದೂರ ಮಾಡುವುದೇ ಇದರ ಮುಖ್ಯ ಉದ್ದೇಶ. |
| | ಪ್ರಸ್ತಾವಿತ ಹದಿಹರೆಯದವರ ಶಿಕ್ಷಣ ಕಾರ್ಯಕ್ರಮ | ತರಗತಿ 8–12 ಗಾಗಿ ವಾರಕ್ಕೆ ಎರಡು ಸಮರ್ಪಿತ ಅಧಿವೇಶನಗಳು: ದೈಹಿಕ ಮತ್ತು ಹಾರ್ಮೋನಲ್ ಬದಲಾವಣೆಗಳ ಕುರಿತಾಗಿ ಅಧಿವೇಶನಗಳು ನಡೆಯಲಿದ್ದು, ನಿಖರತೆ ಮತ್ತು ಆರಾಮವನ್ನು ಖಚಿತಪಡಿಸಲು ಸಾಮಾನ್ಯ ಶಿಕ್ಷಕರ ಬದಲು ವೈದ್ಯಕೀಯ ತಜ್ಞರು ಮತ್ತು ಸಮಾಲೋಚಕರು ಈ ಅಧಿವೇಶನಗಳನ್ನು ನಡೆಸುತ್ತಾರೆ. | Rಬೆಳೆಯುವಿಕೆಗೆ ಸಂಬಂಧಿಸಿದ ಮಿಥ್ಯೆಗಳು ಮತ್ತು ನಿಷೇಧಗಳನ್ನು ವೈದ್ಯಕೀಯ ತಥ್ಯಗಳಿಂದ ಬದಲಾಯಿಸುವುದು ಈ ಕಾರ್ಯಕ್ರಮದ ಉದ್ದೇಶ. ಜೊತೆಗೆ, ಗಡಿ ರೇಖೆಗಳ ಅರಿವು, ಸಮ್ಮತಿ (consent) ಮತ್ತು ರಕ್ಷಣೆ —ವಿಶೇಷವಾಗಿ POCSO ಕಾಯಿದೆಯ ಅರಿವು—ಮೇಲೆ ಕೇಂದ್ರೀಕರಣ ಮಾಡಲಾಗುತ್ತದೆ. |
| | ನೈತಿಕ ಮತ್ತು ಮೌಲ್ಯ ಶಿಕ್ಷಣ (ಅರಿವಿನ ಅರಿವು / ಸತ್ಯ ವಿಕಾಸ) | ಪಠ್ಯಕ್ರಮ: ತರಗತಿ 1–10 ಗಾಗಿ ಕಡ್ಡಾಯ ನೈತಿಕ ವಿಜ್ಞಾನ ತರಗತಿಗಳು; ಪ್ರಾಮಾಣಿಕತೆ, ಸಹಾನುಭೂತಿ ಮತ್ತು ಸಂವಿಧಾನಾತ್ಮಕ ಮೌಲ್ಯಗಳಂತಹ ಮೌಲ್ಯಗಳ ಮೇಲೆ ಕೇಂದ್ರೀಕೃತವಾಗಿದ್ದು, ಸಂವಾದಾತ್ಮಕ ಕಥನ ಹಾಗೂ ಮೌಲ್ಯಾಧಾರಿತ ಚರ್ಚೆಗಳ ಮೂಲಕ ಬೋಧನೆ ಮಾಡಲಾಗುತ್ತದೆ. | ಶಿಕ್ಷಣವು ಅಂಕಗಳಿಗೆ ಮಾತ್ರ ಸೀಮಿತವಲ್ಲ; ಅದು "ಒಳ್ಳೆಯ ನಾಗರಿಕ"ನನ್ನು ರೂಪಿಸುವುದಾಗಿದೆ ಎಂಬ ದೃಷ್ಟಿಕೋನಕ್ಕೆ ಒತ್ತು ನೀಡುತ್ತದೆ. ಧಾರ್ಮಿಕ ಉಪದೇಶಗಳಿಗಿಂತ ಸಾರ್ವತ್ರಿಕ ಮಾನವ ಮೌಲ್ಯಗಳ ಮೇಲೆ ಗಮನ ಹರಿಸಲಾಗುತ್ತದೆ. |

| ಆದೇಶ | ವಿಧಾನ / ಕಲಂ | ಪ್ರಮುಖ ತತ್ವಗಳು | ಸಂಬಂಧಿತತೆ |
|---|---|---|---|
| ಕಾನೂನು | ಕಾವ್ಯ ಮುಖರ್ಜಿ ಸಾಹಾ ವಿರುದ್ಧ ಭಾರತ ಸರ್ಕಾರ ಹಾಗೂ ಇತರರು (2025) (ತೀರ್ಪು ನಿರೀಕ್ಷೆಯಲ್ಲಿದೆ) | ಅರ್ಜಿದಾರರು, NCERT ಹಾಗೂ ವಿವಿಧ SCERTಗಳು ಶಾಲಾ ಪಠ್ಯಕ್ರಮಗಳಲ್ಲಿ ಸಮಗ್ರ ಲೈಂಗಿಕತೆ ಶಿಕ್ಷಣ (CSE) ವನ್ನು ಜಾರಿಗೊಳಿಸಲು ವಿಫಲವಾಗಿವೆ ಎಂದು ವಾದಿಸಿದ್ದಾರೆ. ಈ ವಿಫಲತೆ NALSA ಮತ್ತು Society for Enlightenment ತೀರ್ಪುಗಳ ಮೂಲಕ ನೀಡಲಾದ, CSE ಅನ್ನು ಕಡ್ಡಾಯಗೊಳಿಸುವ ನ್ಯಾಯಾಂಗ ನಿರ್ದೇಶನಗಳ ನೇರ ಉಲ್ಲಂಘನೆಯಾಗಿದೆ ಎಂದು ಅರ್ಜಿಯಲ್ಲಿ ತಿಳಿಸಲಾಗಿದೆ.<br>ಇದಕ್ಕೆ ಜೊತೆಗೆ, ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ (ಹಕ್ಕುಗಳ ರಕ್ಷಣೆ) ಅಧಿನಿಯಮ, 2019ರ ಸೆಕ್ಷನ್ 2(d) ಮತ್ತು ಸೆಕ್ಷನ್ 13ಗಳ ಅಡಿಯಲ್ಲಿ ನೀಡಲಾಗಿರುವ ಸಮನ್ವಯ ಶಿಕ್ಷಣವನ್ನು ಕಡ್ಡಾಯಗೊಳಿಸುವ ಕಾನೂನುಬದ್ಧ ಕರ್ತವ್ಯಗಳ ಉಲ್ಲಂಘನೆಯಾಗಿಯೂ ಇದನ್ನು ಅರ್ಜಿ ಉಲ್ಲೇಖಿಸುತ್ತದೆ. | ಈ ಪ್ರಕರಣದಲ್ಲಿ ಅರ್ಜಿದಾರರ ಪರವಾದ ತೀರ್ಪು ಹೊರಬಂದಲ್ಲಿ, NCERT ಮತ್ತು SCERTಗಳು ತಮ್ಮ ಪಠ್ಯಕ್ರಮಗಳನ್ನು ಸಮಗ್ರವಾಗಿ ಮರುಪರಿಶೀಲಿಸಿ ಪರಿಷ್ಕರಿಸಲು ಸ್ಪಷ್ಟ ನಿರ್ದೇಶನವನ್ನು ನೀಡುವ ಸಾಧ್ಯತೆ ಇದೆ. |
| | ಸುಕ್ದೇಬ್ ಸಾಹಾ ವಿರುದ್ಧ ಆಂಧ್ರಪ್ರದೇಶ ರಾಜ್ಯ (2025) | ನ್ಯಾಯಾಲಯವು ಜೀವನ ಹಕ್ಕು (ವಿಧಿ 21) ಯಲ್ಲಿ ಮಾನಸಿಕ ಆರೋಗ್ಯದ ಹಕ್ಕು ಕೂಡ ಸೇರಿದೆ ಎಂದು ಸ್ಪಷ್ಟವಾಗಿ ಘೋಷಿಸಿದೆ. ಇದರಿಂದ ಮಾನಸಿಕ ಕಲ್ಯಾಣವು ಕೇವಲ ನೀತಿ ಗುರಿಯಾಗಿರದೆ, ನ್ಯಾಯಾಲಯದಲ್ಲಿ ಜಾರಿಗೆ ತರುವ ಮೂಲಭೂತ ಹಕ್ಕು ಆಗಿದೆ. ಶಾಲೆಗಳು ಇನ್ನು ಮುಂದೆ ಕೇವಲ ಶೈಕ್ಷಣಿಕ ಸೇವಾ ಸಂಸ್ಥೆಗಳಲ್ಲ; ಅವುಗಳು ತಮ್ಮ ವಿದ್ಯಾರ್ಥಿಗಳ ಮಾನಸಿಕ ಸಮಗ್ರತೆಯನ್ನು ಕಾಪಾಡುವ ಕಾನೂನುಬದ್ಧ ಸಂರಕ್ಷಕರಾಗಿವೆ.<br><br>ಈ ತೀರ್ಪು ವಿದ್ಯಾರ್ಥಿ ಆತ್ಮಹತ್ಯೆಯ ಕುರಿತು ಇರುವ ಕಥನವನ್ನು "ವೈಯಕ್ತಿಕ ವೈಫಲ್ಯ" (ದೌರ್ಬಲ್ಯ, ಪ್ರತಿರೋಧಶಕ್ತಿಯ ಕೊರತೆ) ಎಂಬ ದೃಷ್ಟಿಕೋನದಿಂದ "ರಚನಾತ್ಮಕ ಹಿಂಸೆ" ಎಂಬ ದೃಷ್ಟಿಕೋನದತ್ತ ತಿರುಗಿಸಿದೆ. ಸಂಸ್ಥೆಯು ಕಡ್ಡಾಯ ಬೆಂಬಲ ವ್ಯವಸ್ಥೆಗಳನ್ನು ಒದಗಿಸಲು ವಿಫಲವಾದರೆ ಅಥವಾ ಬುಲ್ಲಿಯಿಂಗ್/ಕಿರುಕುಳವನ್ನು ನಿರ್ಲಕ್ಷಿಸಿದರೆ, ಮತ್ತು ಆ ನಿರ್ಲಕ್ಷ್ಯವು ಸ್ವಯಂ ಹಾನಿಗೆ ಕಾರಣವಾದರೆ, ಸಂಸ್ಥೆ ಕಾನೂನುಬದ್ಧವಾಗಿ ಹೊಣೆಗಾರ ಎಂಬುದನ್ನು ತೀರ್ಪು ಸ್ಥಾಪಿಸಿದೆ.<br><br>ಸುರಕ್ಷತೆ ಎಲ್ಲರಿಗೂ ಒಂದೇ ರೀತಿಯಲ್ಲ ಎಂಬುದನ್ನು ಈ ತೀರ್ಪು ಒಪ್ಪಿಕೊಂಡಿದೆ. ವಿಶೇಷವಾಗಿ LGBTQ+ ವ್ಯಕ್ತಿಗಳು, SC/ST/OBC ಸಮುದಾಯಗಳ ವಿದ್ಯಾರ್ಥಿಗಳು ಮತ್ತು ಅಂಗವೈಕಲ್ಯ ಹೊಂದಿರುವವರು ಹೆಚ್ಚು ಕಿರುಕುಳ ಮತ್ತು ಸಾಮಾಜಿಕ ಒಂಟಿತನಕ್ಕೆ ಒಳಗಾಗುವ ಅಪಾಯದಲ್ಲಿದ್ದಾರೆ ಎಂದು ಗುರುತಿಸಿದೆ.. | LGBTQ+ ಸಮುದಾಯಗಳ ವಿದ್ಯಾರ್ಥಿಗಳೊಂದಿಗೆ ಸಂವೇದನಾಶೀಲವಾಗಿ ತೊಡಗಿಸಿಕೊಳ್ಳಲು, ಎಲ್ಲಾ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೂ ಕಡ್ಡಾಯ ತರಬೇತಿ ನೀಡಬೇಕೆಂದು ಮಾರ್ಗಸೂಚಿಗಳು ಸೂಚಿಸುತ್ತವೆ.<br><br>"ಜೀವನ ಕೌಶಲ್ಯ ಶಿಕ್ಷಣ"ವನ್ನು ವಿದ್ಯಾರ್ಥಿಗಳ ಪರಿಚಯ/ಓರಿಯಂಟೇಶನ್ ಕಾರ್ಯಕ್ರಮಗಳಲ್ಲಿ ಏಕೀಕರಿಸುವುದು ಕಡ್ಡಾಯವೆಂದು ತೀರ್ಪು ನಿರ್ದಿಷ್ಟಪಡಿಸಿದೆ.<br><br>100 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರುವ ಶೈಕ್ಷಣಿಕ ಸಂಸ್ಥೆಗಳು, ಅರ್ಹ ಪೂರ್ಣಕಾಲಿಕ ಸಮಾಲೋಚಕರು ಮತ್ತು ಮನೋವೈಜ್ಞಾನಿಕರನ್ನು ನೇಮಿಸಬೇಕು.<br><br>ಸಂಸ್ಥೆಗಳು ಟೆಲಿ-ಮಾನಸ್ (Tele-MANAS) — ರಾಷ್ಟ್ರೀಯ ಮಾನಸಿಕ ಆರೋಗ್ಯ ಸಹಾಯವಾಣಿ — ಹಾಗೂ ಸ್ಥಳೀಯ ಸಂಕಷ್ಟ ಪರಿಹಾರ ಕೇಂದ್ರಗಳ ಸಂಪರ್ಕ ವಿವರಗಳನ್ನು ಕ್ಯಾಂಪಸ್‌ನಲ್ಲೂ ಮತ್ತು ಸಂಸ್ಥೆಯ ವೆಬ್‌ಸೈಟ್‌ಗಳಲ್ಲೂ ಸ್ಪಷ್ಟವಾಗಿ ಪ್ರದರ್ಶಿಸಬೇಕು |

| ಆದೇಶ | ವಿಧಾನ / ಕಲಂ | ಪ್ರಮುಖ ತತ್ವಗಳು | ಸಂಬಂಧಿತತೆ |
|---|---|---|---|
| ಕಾನೂನು | ಸೊಸೈಟಿ ಫಾರ್ ಎನ್‌ಲೈಟನ್‌ಮೆಂಟ್ ಅಂಡ್ ವಾಲಂಟರಿ ಆಕ್ಷನ್ ಹಾಗೂ ಮತ್ತೊಬ್ಬರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು (2024) | ಬಾಲ್ಯ  ವಿವಾಹ ಎಂಬ ಸಾಮಾಜಿಕ ದುರಾಚಾರದಿಂದ ಮಕ್ಕಳನ್ನು ರಕ್ಷಿಸುವ ರಾಜ್ಯದ ಕರ್ತವ್ಯವನ್ನು ಕೇವಲ ಶಿಕ್ಷಾತ್ಮಕ ಕಾನೂನುಗಳ ಮೂಲಕ ಮಾತ್ರ ನೆರವೇರಿಸಲಾಗುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. ಇದಕ್ಕಾಗಿ ಸಕ್ರಿಯ ಮತ್ತು ತಡೆಯುವಿಕೆಗೆ ಕೇಂದ್ರೀಕೃತ ಕ್ರಮಗಳು ಅಗತ್ಯವೆಂದು ಒತ್ತಿ ಹೇಳಿದೆ.<br><br>ಬಾಲ್ಯ  ವಿವಾಹವು ವಿಧಿ 21ರ ನೇರ ಉಲ್ಲಂಘನೆಯಾಗಿದೆ ಎಂದು ನ್ಯಾಯಾಲಯ ಸ್ಪಷ್ಟವಾಗಿ ಸಂಪರ್ಕಿಸಿದೆ. ಇದು ಮಕ್ಕಳ ವೈಯಕ್ತಿಕ ಸ್ವಾಯತ್ತತೆ, ದೇಹಾತ್ಮಕ ಅಖಂಡತೆ, ಮತ್ತು ಮಾನಸಿಕ ಹಾಗೂ ದೈಹಿಕ ಆರೋಗ್ಯದ  ಲಭ್ಯತೆಯನ್ನು ಕಸಿದುಕೊಳ್ಳುತ್ತದೆ; ಜೊತೆಗೆ ಅವರು ಸಿದ್ಧರಾಗಿರದ ವಯಸ್ಕ ಪಾತ್ರಗಳಿಗೆ ಅವರನ್ನು ಬಲವಂತವಾಗಿ ತಳ್ಳುತ್ತದೆ ಎಂದು ತೀರ್ಪು ತಿಳಿಸಿದೆ. | ನ್ಯಾಯಾಲಯವು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಶಾಲಾ ಪಠ್ಯಕ್ರಮಗಳಲ್ಲಿ ಸಮಗ್ರ ಲೈಂಗಿಕತೆ ಶಿಕ್ಷಣ (CSE) ಅನ್ನು ಏಕೀಕರಿಸುವಂತೆ ನೇರ ಮತ್ತು ಸ್ಪಷ್ಟ ಆದೇಶವನ್ನು ಹೊರಡಿಸಿದೆ. |
| | ನವತೇಜ್ ಸಿಂಗ್ ಜೋಹರ್ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ (2018) | ಸಂವಿಧಾನಾತ್ಮಕ ನೈತಿಕತೆಯ ಪ್ರಾಧಾನ್ಯತೆ | ಪಠ್ಯಕ್ರಮದ ವಿಷಯವು ಸಮಾನತೆ ಮತ್ತು ಭೇದಭಾವರಹಿತತೆ ಎಂಬ ಸಂವಿಧಾನಾತ್ಮಕ ತತ್ವಗಳ ಮೇಲೆ ಆಧಾರಿತವಾಗಿರಬೇಕು; ಭೇದಭಾವಕಾರಿ ಆಗಿರಬಹುದಾದ ಪ್ರಚಲಿತ ಸಾಮಾಜಿಕ, ಸಾಂಸ್ಕೃತಿಕ ಅಥವಾ ಧಾರ್ಮಿಕ ಮಾನದಂಡಗಳ ಮೇಲೆ ಅಲ್ಲ. |
| | | ಲೈಂಗಿಕ ಅಭಿರುಚಿಯಲ್ಲಿ ಗೌರವ ಮತ್ತು ಗೌಪ್ಯತೆಯ ಹಕ್ಕು | ಶೈಕ್ಷಣಿಕ ಪಠ್ಯಸಾಮಗ್ರಿಗಳು ವಿಭಿನ್ನ ಲೈಂಗಿಕ ಅಭಿರುಚಿಗಳನ್ನು ಮಾನವ ಗುರುತಿನ ಸಹಜ ವೈವಿಧ್ಯಗಳಾಗಿ ಚಿತ್ರಿಸಬೇಕು. ಅವುಗಳಲ್ಲಿ ಯಾವುದೇ ರೀತಿಯ ಕಳಂಕಕಾರಿ, ಅವಮಾನಕಾರಿ ಅಥವಾ ಭೇದಭಾವ ಉಂಟುಮಾಡುವ ವಿಷಯಗಳು ಇರಬಾರದು. |
| | | ಲಿಂಗತ್ವದ  ಸ್ವಯಂ ಗುರುತಿನ ಹಕ್ಕು | ಪಠ್ಯಕ್ರಮಗಳು ಕಠಿಣ ದ್ವೈತ (ಬೈನರಿ) ದೃಷ್ಟಿಕೋನವನ್ನು ಮೀರಿಸಿ, ಸ್ವಯಂ ಗುರುತಿಸಲಾದ ಲಿಂಗತ್ವ ಎಂಬ ಪರಿಕಲ್ಪನೆಯನ್ನು ಗೌರವಿಸಬೇಕು. ವೈದ್ಯಕೀಯ ಹಾಗೂ ಸಾಮಾಜಿಕ ವಿಜ್ಞಾನ ಪಠ್ಯಕ್ರಮಗಳು ಬೈನರಿ ಅಲ್ಲದ (ನಾನ್-ಬೈನರಿ) ಲಿಂಗತ್ವದ  ಗುರುತುಗಳನ್ನು ರೋಗೀಕರಿಸುವುದು ಅಥವಾ ಅಸಾಮಾನ್ಯವೆಂದು ಚಿತ್ರಿಸುವುದು ತಪ್ಪಿಸಬೇಕು. |

| ಆದೇಶ | ವಿಧಾನ / ಕಲಂ | ಪ್ರಮುಖ ತತ್ವಗಳು | ಸಂಬಂಧಿತತೆ |
|---|---|---|---|
| ಕಾನೂನು | NALSA ವಿ. ಯೂನಿಯನ್ ಆಫ್ ಇಂಡಿಯಾ (2014) | 'ಲಿಂಗ'ದ ಆಧಾರದ ಮೇಲೆ ಭೇದಭಾವ ನಿಷೇಧವು ಲಿಂಗತ್ವ ಗುರುತನ್ನೂ ಒಳಗೊಂಡಿದೆ | ವೃತ್ತಿಪರ ತರಬೇತಿಯಲ್ಲಿ ಉದ್ಯೋಗ, ಆರೋಗ್ಯ ಸೇವೆ ಹಾಗೂ ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲಿ ಟ್ರಾನ್ಸ್‌ಜೆಂಡರ್ ವ್ಯಕ್ತಿಗಳ ವಿರುದ್ಧದ ಭೇದಭಾವವನ್ನು ತಡೆಯುವ ಕುರಿತು ಘಟಕಗಳನ್ನು ಒಳಗೊಂಡಿರಬೇಕು. |
| | | ಲಿಂಗತ್ವದ ಅಭಿವ್ಯಕ್ತಿಯ ಸ್ವಾತಂತ್ರ್ಯ | ಶೈಕ್ಷಣಿಕ ಸಂಸ್ಥೆಗಳು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಪ್ರತೀಕಾರದ ಭಯವಿಲ್ಲದೆ ತಮ್ಮ ಲಿಂಗತ್ವ ಗುರುತನ್ನು ವ್ಯಕ್ತಪಡಿಸಬಹುದಾದಂತಹ ಪರಿಸರವನ್ನು ರೂಪಿಸಬೇಕು. ಇದಕ್ಕೆ ಸಮನ್ವಯತೆಯ ಸಂಸ್ಥಾ ನೀತಿಗಳು ಮತ್ತು ಸಂವೇದನಾಶೀಲ ಪಠ್ಯಕ್ರಮದ ಬೆಂಬಲ ಅಗತ್ಯವಾಗಿದೆ. |
| | | ರಾಜ್ಯದ ಸಕಾರಾತ್ಮಕ ಕರ್ತವ್ಯಗಳು | ಇದು ರಾಜ್ಯ ನಿಯಂತ್ರಿತ ಶೈಕ್ಷಣಿಕ ಸಂಸ್ಥೆಗಳ ಮೇಲೆ ಸಕಾರಾತ್ಮಕ ಕರ್ತವ್ಯವನ್ನು ವಿಧಿಸುತ್ತದೆ. ಅಂದರೆ, LGBTQIA+ ಸಮುದಾಯಗಳ ಹಕ್ಕುಗಳು ಮತ್ತು ಅವರ ಬದುಕಿನ ವಾಸ್ತವತೆಗಳ ಕುರಿತು ವಿದ್ಯಾರ್ಥಿಗಳನ್ನು ಶಿಕ್ಷಣಗೊಳಿಸುವುದು ಹಾಗೂ ಸಮಾಜದಲ್ಲಿರುವ ಕಳಂಕ ಮತ್ತು ಪೂರ್ವಾಗ್ರಹಗಳನ್ನು ಎದುರಿಸುವ ಉದ್ದೇಶದಿಂದ ಪಠ್ಯಕ್ರಮಗಳನ್ನು ಮುಂಚಿತವಾಗಿ ರೂಪಿಸಿ ಜಾರಿಗೊಳಿಸುವ ಜವಾಬ್ದಾರಿಯನ್ನು ರಾಜ್ಯಕ್ಕೆ ನೀಡುತ್ತದೆ. |

# **ಅನುಬಂಧ ಬಿ:**
## ಪ್ರಮುಖ ಮಾಹಿತಿದಾರರಿಂದ ಪಡೆದ ಒಳನೋಟಗಳು

ಈ ಅನುಬಂಧವು ಕಾನೂನು ತಜ್ಞರು, ವೈದ್ಯಕೀಯ ವೃತ್ತಿಪರರು ಹಾಗೂ ಶಿಕ್ಷಣ ಕ್ಷೇತ್ರದ ಹೋರಾಟಗಾರರೊಂದಿಗೆ ನಡೆಸಿದ ಸಂದರ್ಶನಗಳಿಂದ ಪಡೆದ ಕಂಡುಬಂದ ಪ್ರಮುಖ ಅಂಶಗಳನ್ನು ಸಂಕ್ಷಿಪ್ತವಾಗಿ ನೀಡುತ್ತದೆ. ಈ ಒಳನೋಟಗಳು ಶಾಲಾ ವ್ಯವಸ್ಥೆಯೊಳಗೆ **ಲಿಂಗತ್ವ ಸಮಾನತೆ, ಮಾನಸಿಕ ಆರೋಗ್ಯ, ಸಮಗ್ರ ಲೈಂಗಿಕತೆ ಶಿಕ್ಷಣ (CSE), ಪುನಃಶ್ಚೈತನ್ಯಕಾರಿ ಕ್ರಮಗಳು (Restorative Practices)** ಮತ್ತು ವೈಯಕ್ತಿಕ ಸುರಕ್ಷತಾ ಶಿಕ್ಷಣ (PSE)ಗಳನ್ನು ಏಕೀಕರಿಸುವ ಕುರಿತು ಕೇಂದ್ರೀಕೃತವಾಗಿವೆ. ವಿಶೇಷವಾಗಿ, ಕರ್ನಾಟಕದ ಸಂದರ್ಭ ಹಾಗೂ ವಿಸ್ತೃತ ಭಾರತೀಯ ಪರಿಸ್ಥಿತಿಗಳಲ್ಲಿ ಈ ಏಕೀಕರಣ ಹೇಗೆ ಅಗತ್ಯ ಮತ್ತು ಪರಿಣಾಮಕಾರಿ ಎಂಬುದರ ಮೇಲೆ ಗಮನ ಹರಿಸಲಾಗಿದೆ.

## I. ಸಮಗ್ರ ಲೈಂಗಿಕತೆ ಶಿಕ್ಷಣ (CSE) ಮತ್ತು ವೈಯಕ್ತಿಕ ಸುರಕ್ಷತಾ ಶಿಕ್ಷಣ (PSE)

### A. ಪಠ್ಯಕ್ರಮದ ಪರಿಕಲ್ಪನೆ

- **ಜೀವನ ಕೌಶಲ್ಯ ಆಧಾರಿತ ವಿಧಾನ:** ತಜ್ಞರು ಒತ್ತಿ ಹೇಳುವಂತೆ, CSE ಕೇವಲ ಜೈವಿಕ ಮಾಹಿತಿಗೆ ಸೀಮಿತವಾಗದೆ, ಜೀವನ ಕೌಶಲ್ಯಗಳು, ದೇಹ ಚಿತ್ರಣ (body image), ಕಿರುಕುಳ, ಹಾಗೂ ಅಧಿಕಾರ ಮತ್ತು ಶಕ್ತಿ ಸಮೀಕರಣಗಳು (power dynamics) ಸೇರಿದಂತೆ ವಿಶಾಲ ವಿಷಯಗಳನ್ನು ಒಳಗೊಂಡಿರಬೇಕು. ಇದು ವಿದ್ಯಾರ್ಥಿಗಳು ಆರೋಗ್ಯಕರ ಬೆಳವಣಿಗೆಗೆ ಮೂಲಭೂತ ನೆಲೆಯನ್ನು ಒದಗಿಸಿ, ಮಾಹಿತಿ ಆಧಾರಿತ ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಅವರನ್ನು ಸಬಲೀಕರಿಸುತ್ತದೆ.
- **ತಪ್ಪುಮಾಹಿತಿಗೆ ಪ್ರತಿರೋಧ:** ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ (SRH) ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಹದಿಹರೆಯದವರು ಎದುರಿಸುವ ವ್ಯಾಪಕ ತಪ್ಪುಮಾರ್ಗದ ಮಾಹಿತಿಗೆ ಪ್ರತಿರೋಧ ನೀಡಲು, ನಿಖರವಾದ ಮಾಹಿತಿಯ ಅಗತ್ಯ ಅತ್ಯಂತ ತುರ್ತಾಗಿದೆ.
- **ಕಾನೂನು ಬೆಂಬಲ:** ಕಾನೂನು ಹಲವಾರು ಸಂದರ್ಭಗಳಲ್ಲಿ CSE ಅನ್ನು ಕಡ್ಡಾಯಗೊಳಿಸುವ ಬಗ್ಗೆ ಮೌನವಾಗಿದ್ದರೂ, ವಿವಿಧ ಉಚ್ಚ ನ್ಯಾಯಾಲಯಗಳು ಮತ್ತು ಸುಪ್ರೀಂ ಕೋರ್ಟ್ ತೀರ್ಪುಗಳು ಇದನ್ನು ದೌರ್ಜನ್ಯ ಮತ್ತು ಹಿಂಸೆಯನ್ನು ತಡೆಯುವ ತಡೆಗಟ್ಟುವ ಕ್ರಮವನ್ನು ಶಿಕ್ಷಣದ ಭಾಗವಾಗಿ ನೀಡಬೇಕೆಂದು ಬೆಂಬಲಿಸುತ್ತವೆ.

### B. ಅನುಷ್ಠಾನ ಸಂಬಂಧಿತ ಸವಾಲುಗಳು ಮತ್ತು ಪ್ರತಿರೋಧ

- **ಸಂಸ್ಥಾತ್ಮಕ ಹಿಂಜರಿಕೆ:** ಇದು ಪ್ರಮುಖ ಅಡೆತಡೆಯಾಗಿ ಕಾಣಿಸಿಕೊಳ್ಳುವುದು ಪೋಷಕರು ಮತ್ತು ಶಿಕ್ಷಕರಲ್ಲಿರುವ ಹಿಂಜರಿಕೆ. ಇಂತಹ ಕಾರ್ಯಕ್ರಮಗಳ ಅಗತ್ಯವನ್ನು ಒಪ್ಪಿಕೊಂಡರೂ, ಲೈಂಗಿಕತೆ ಕುರಿತು ಮಾತನಾಡಲು ಅವರಿಗೆ ಅಸೌಕರ್ಯ ಉಂಟಾಗುತ್ತದೆ.
- **ಕರ್ನಾಟಕದ ಸಂದರ್ಭ:** ಸಂದರ್ಶನಗಳಲ್ಲಿ ತಿಳಿದುಬಂದಂತೆ, ಕರ್ನಾಟಕದಲ್ಲಿ ಕಾಲೇಜು ವಿದ್ಯಾರ್ಥಿಗಳು ಇತರ ಪ್ರದೇಶಗಳಿಗಿಂತ ಲೈಂಗಿಕತೆ ಕುರಿತು ಹೆಚ್ಚು ಮುಕ್ತವಾಗಿ ಚರ್ಚಿಸಲು ಸಿದ್ಧರಾಗಿದ್ದಾರೆ. ಇದು ಉನ್ನತ ಶಿಕ್ಷಣ ಮಟ್ಟದಲ್ಲಿ ಇಂತಹ ಹಸ್ತಕ್ಷೇಪಗಳಿಗೆ ಅನುಕೂಲಕರ ವಾತಾವರಣವಿದೆ ಎಂಬುದನ್ನು ಸೂಚಿಸುತ್ತದೆ.
- **POCSO ವರದಿ ಸಂಬಂಧಿತ ಸಮಸ್ಯೆಗಳು:** POCSO ಕಾಯ್ದೆಯ ಕಡ್ಡಾಯ ವರದಿ ನಿಯಮವು ಕೆಲವೊಮ್ಮೆ ಶಾಲೆಗಳನ್ನು ಲೈಂಗಿಕತೆ ಶಿಕ್ಷಣ ನೀಡುವುದರಿಂದ ದೂರ ಸರಿಯುವಂತೆ ಮಾಡಬಹುದು. ಪರಸ್ಪರ ಸಮ್ಮತಿಯ ಚಟುವಟಿಕೆಗಳ ಬಹಿರಂಗಪಡಿಸುವಿಕೆಯಿಂದ ಉಂಟಾಗುವ ಕಾನೂನು ಸಂಕೀರ್ಣತೆಗಳ ಭಯ ಇದಕ್ಕೆ ಕಾರಣವಾಗುತ್ತದೆ.
- **ಶೈಕ್ಷಣಿಕ ಪ್ರತಿರೋಧ:** ಪ್ರತಿರೋಧವು ಹೆಚ್ಚಾಗಿ ವಿಜ್ಞಾನ ಮತ್ತು ಎಂಜಿನಿಯರಿಂಗ್ ವಿಭಾಗಗಳಿಂದ ಬರುತ್ತದೆ. ಇಂತಹ ವಿಷಯಗಳನ್ನು ಅವರು “ಸಾಫ್ಟ್” ಅಥವಾ ವೃತ್ತಿಪರ ತರಬೇತಿಗೆ ಸಂಬಂಧಿಸದ ವಿಷಯಗಳೆಂದು ಕಾಣುವ ಪ್ರವೃತ್ತಿ ಇರುತ್ತದೆ.

## II. ಲಿಂಗತ್ವಸಮತೆ  ಮತ್ತು ಮಾನಸಿಕ ಆರೋಗ್ಯ

### A. ಲಿಂಗತ್ವ ಚಲನಶೀಲತೆ ಮತ್ತು ಹಿಂಸಾಚಾರ

- **ಹಿಂಸಾಚಾರ ತಡೆ:** "ಕ್ರಿಟಿಕಲ್ ಸೋಶಿಯಲ್ ಜಸ್ಟಿಸ್ ಅಂಡ್ ಸಿಟಿಜನ್‌ಶಿಪ್" ಎಂಬಂತಹ ಕಾರ್ಯಕ್ರಮಗಳನ್ನು ಲಿಂಗ ಆಧಾರಿತ ಹಿಂಸಾಚಾರ (GBV)ಕ್ಕೆ ಪ್ರತಿಕ್ರಿಯೆಯಾಗಿ ವಿಶೇಷವಾಗಿ ರೂಪಿಸಲಾಗಿದೆ. ಇವು ನೈತಿಕ ನಾಗರಿಕರನ್ನು ರೂಪಿಸುವಲ್ಲಿ ವಿಶ್ವವಿದ್ಯಾಲಯಗಳ ಪಾತ್ರವನ್ನು ಒತ್ತಿಹೇಳುತ್ತವೆ.
- **ಹುಡುಗರ ಒಳಗೊಳ್ಳಿಕೆ:** ಲಿಂಗತ್ವ ಸಮಾನತೆಯನ್ನು ಬೆಳೆಸಲು ಮತ್ತು ಪುರುಷತ್ವದ ಸಾಮಾಜಿಕ ನಿರ್ಮಾಣವನ್ನು ಪ್ರಶ್ನಿಸಲು ಹುಡುಗರನ್ನು ಒಳಗೊಂಡ ಹಸ್ತಕ್ಷೇಪಗಳು ಅತ್ಯಂತ ಅಗತ್ಯ. ಇದು ಸಮಾನತೆಪರ ಮನೋಭಾವಗಳನ್ನು ಬೆಳೆಸಲು ಸಹಾಯಕ.
- **ವೈವಿಧ್ಯ:** ಪಠ್ಯಕ್ರಮಗಳು ಲಿಂಗ ಮತ್ತು ಲೈಂಗಿಕತೆಯ ವೈವಿಧ್ಯವನ್ನು ಮೂಲಭೂತ ಅಂಶಗಳಾಗಿ ಒಳಗೊಳ್ಳಬೇಕು, ಮತ್ತು ಕಠಿಣ ದ್ವಂದ್ವ ಚೌಕಟ್ಟುಗಳನ್ನು ಮೀರಿ ಚರ್ಚೆ ನಡೆಸಬೇಕು.

### B. ಮಾನಸಿಕ ಆರೋಗ್ಯ ಮತ್ತು ಬಾಲ್ಯದಲ್ಲಿನ ಆಘಾತ

- **ಆಘಾತದ ಪರಿಣಾಮ:** ತಜ್ಞರು ಪ್ರತಿಕೂಲ ಬಾಲ್ಯ ಅನುಭವಗಳು (ACEs) ಮತ್ತು ದೀರ್ಘಕಾಲೀನ ದೈಹಿಕ ಹಾಗೂ ಮಾನಸಿಕ ಆರೋಗ್ಯ ಸಮಸ್ಯೆಗಳ ನಡುವಿನ ಗಾಢ ಸಂಬಂಧವನ್ನು ಒತ್ತಿಹೇಳಿದ್ದಾರೆ. ಇದರಲ್ಲಿ ದೀರ್ಘಕಾಲೀನ ರೋಗಗಳು ಮತ್ತು ರೋಗನಿರೋಧಕ ಶಕ್ತಿಯ ಕುಂದಿಕೆ ಸೇರಿದಂತೆ ಹಲವು ಪರಿಣಾಮಗಳು ಸೇರಿವೆ.
- **ಅತಿಯಾಗಿ ವೈದ್ಯಕೀಯೀಕರಣವಿಲ್ಲದ ದೃಷ್ಟಿಕೋನ:** ಮಾನಸಿಕ ಆರೋಗ್ಯ ಬೆಂಬಲ ಅತ್ಯಂತ ಅಗತ್ಯವಾದರೂ, ಸಮಸ್ಯೆಗಳನ್ನು ಅತಿಯಾಗಿ ವೈದ್ಯಕೀಯೀಕರಿಸುವ ಬಗ್ಗೆ ಪ್ರತಿಪಾದಕರು ಎಚ್ಚರಿಸುತ್ತಾರೆ. ಬದಲಾಗಿ ಕುಟುಂಬದ ಚಲನಶೀಲತೆ, ದೇಹ ಚಿತ್ರಣ , ಜೀವನ ಕೌಶಲ್ಯಗಳು ಮುಂತಾದ ಸಾಮಾಜಿಕ ಅಂಶಗಳ ಮೇಲೆ ಕೇಂದ್ರೀಕರಣ ಇರಬೇಕು ಎಂದು ಅವರು ಸೂಚಿಸುತ್ತಾರೆ.

## III. ಪುನಃಶ್ಚೈತನ್ಯಕಾರಿ ಅಭ್ಯಾಸಗಳತ್ತ ಮತ್ತು ದೈಹಿಕ ಶಿಕ್ಷೆಯಿಂದ ದೂರ ಸರಿಯುವುದು

### A. ಮಗು-ಕೇಂದ್ರಿತ ಕಾನೂನು ಚೌಕಟ್ಟುಗಳು

- **ಮಗುವಿನ ಸರ್ವೋತ್ತಮ ಹಿತಾಸಕ್ತಿ:** ಯಾವುದೇ ಕ್ರಮಗಳ ಜಾರಿಯು ಮಗುವಿನ ಸರ್ವೋತ್ತಮ ಹಿತಾಸಕ್ತಿ ಮತ್ತು ಅವರ ಮೇಲೆ ಪರಿಣಾಮ ಬೀರುವ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುವ ಅವರ ಹಕ್ಕನ್ನು ಒಳಗೊಂಡ "ಅತ್ಯಮೂಲ್ಯ ತತ್ವಗಳ" (Paramount principles) ಆಧಾರದ ಮೇಲೆ ಮಾರ್ಗದರ್ಶನ ಪಡೆಯಬೇಕು.
- **ತಡೆಗಟ್ಟುವ ಕಾನೂನು ಕ್ರಮಗಳು:** ಪೋಕ್ಸೋ (POCSO) ಕಾಯಿದೆಯನ್ನು ಒಂದು ತಡೆಗಟ್ಟುವ ಸಾಧನವಾಗಿ ವಿವರಿಸಲಾಗಿದೆ. ಮಗುವಿನ ಮೇಲೆ ದೌರ್ಜನ್ಯ ಅಥವಾ ದುರುಪಯೋಗ ನಡೆಯುವ ಸಾಧ್ಯತೆಯಿದ್ದಲ್ಲಿ ದೂರು ದಾಖಲಿಸಲು ಇದು ಅವಕಾಶ ನೀಡುತ್ತದೆ. ಶಾಲಾ ಪರಿಸರದಲ್ಲಿ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಈ ಕಾಯಿದೆಯನ್ನು ಬಳಸಲಾಗುತ್ತಿದೆ.

### B. ಪ್ರಾಥಮಿಕ ಮೌಲ್ಯಮಾಪನದಲ್ಲಿನ ದೋಷಗಳು

- **ಮೌಲ್ಯಮಾಪನದ ಕಾಳಜಿಗಳು:** ಬಾಲಾಪರಾಧ ನ್ಯಾಯ ಕಾಯಿದೆಯಡಿ (Juvenile Justice Act), ಮಗುವಿನ ಮಾನಸಿಕ ಸ್ಥಿತಿಯನ್ನು ನಿರ್ಣಯಿಸುವ ಪ್ರಕ್ರಿಯೆಯು (ಪ್ರಾಥಮಿಕ ಮೌಲ್ಯಮಾಪನ) ಹೆಚ್ಚಾಗಿ ದೋಷಪೂರಿತ ಮತ್ತು ಮೇಲ್ನೋಟದ ಕ್ರಮವೆಂದು ಟೀಕಿಸಲ್ಪಡುತ್ತದೆ. ತರಬೇತಿ ಪಡೆದ ಸಿಬ್ಬಂದಿಯ ಕೊರತೆ ಮತ್ತು ಪ್ರಮಾಣೀಕೃತ ಮಾನದಂಡಗಳ (standardized parameters) ಇಲ್ಲದಿರುವಿಕೆಯೇ ಇದಕ್ಕೆ ಮುಖ್ಯ ಕಾರಣವಾಗಿದೆ.

## IV. ಜಾರಿಯಲ್ಲಿನ ಲೋಪದೋಷಗಳು ಮತ್ತು ರಚನಾತ್ಮಕ ಶಿಫಾರಸುಗಳು

### A. ಶಾಲಾ ಮೂಲಸೌಕರ್ಯಗಳನ್ನು ಬಲಪಡಿಸುವುದು

- **ಮಕ್ಕಳ ಸಂರಕ್ಷಣಾ ಸಮಿತಿಗಳು:** ಕಾನೂನಿನ ಪ್ರಕಾರ ಕಡ್ಡಾಯವಾಗಿದ್ದರೂ ಸಹ, ಅನೇಕ ಸರ್ಕಾರಿ ಶಾಲೆಗಳಲ್ಲಿ ಮತ್ತು ದೂರದ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಕಾರ್ಯನಿರ್ವಹಿಸುವ ಮಕ್ಕಳ ಸಂರಕ್ಷಣಾ ಸಮಿತಿಗಳ ಕೊರತೆಯಿದೆ.
- **ತರಬೇತಿ ಪಡೆದ ಸಿಬ್ಬಂದಿ:** ಸಮರ್ಥ ಸಿಬ್ಬಂದಿಯ ತೀವ್ರ ಕೊರತೆಯಿದೆ. ಪ್ರತಿ ಶಾಲೆಯಲ್ಲಿ ಕನಿಷ್ಠ ಒಬ್ಬ ತರಬೇತಿ ಪಡೆದ ಜೀವಶಾಸ್ತ್ರ (Biology) ಶಿಕ್ಷಕರಿಗಾದರೂ ಸಮಗ್ರ ಲೈಂಗಿಕ ಶಿಕ್ಷಣ (CSE) ಮತ್ತು ಸೂಕ್ಷ್ಮ ಆರೋಗ್ಯ ವಿಚಾರಗಳನ್ನು ನಿರ್ವಹಿಸಲು ಅಗತ್ಯವಿರುವ ಕೌಶಲ್ಯ ಹಾಗೂ ತರಬೇತಿಯನ್ನು ನೀಡಬೇಕು ಎಂದು ತಜ್ಞರು ಸಲಹೆ ನೀಡುತ್ತಾರೆ.

### B. ಸರ್ಕಾರ ಮತ್ತು ಇಲಾಖೆಗಳ ನಡುವಿನ ಸಮನ್ವಯ

- **ಇಲಾಖೆಗಳ ನಡುವಿನ ಸಹಕ್ರಿಯೆ:** ಪರಿಣಾಮಕಾರಿ ಅನುಷ್ಠಾನಕ್ಕಾಗಿ ಸ್ಥಳೀಯ ಜಿಲ್ಲಾ ಮಟ್ಟದಲ್ಲಿ ಆರೋಗ್ಯ, ಶಿಕ್ಷಣ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ನಡುವೆ ಉತ್ತಮ ಸಮನ್ವಯದ ಅಗತ್ಯವಿದೆ.

- **ದಾನಕ್ಕಿಂತ ಕಡ್ಡಾಯ ನಿಯಮಗಳು:** ವೈಯಕ್ತಿಕವಾಗಿ ಶಾಲೆಗಳ ಸೌಜನ್ಯ ಅಥವಾ ಇಚ್ಛಾಶಕ್ತಿಯನ್ನು ಅವಲಂಬಿಸುವ ಬದಲು, ಸಮಗ್ರ ಲೈಂಗಿಕ ಶಿಕ್ಷಣ (CSE) ಮತ್ತು ಸುರಕ್ಷತಾ ಕಾರ್ಯಕ್ರಮಗಳಿಗೆ ಆದ್ಯತೆ ಸಿಗುವಂತೆ ಮಾಡಲು ಅವುಗಳನ್ನು ಶಿಕ್ಷಣ ಮಂಡಳಿಯ ಪಠ್ಯಕ್ರಮ ಮತ್ತು ಮೌಲ್ಯಮಾಪನಗಳಲ್ಲಿ ಸಂಯೋಜಿಸಬೇಕು.

- **ಆಡಳಿತದ ಮೇಲೆ ಗಮನ:** ಪ್ರಸ್ತುತ ಇರುವ ಕಾನೂನು ಚೌಕಟ್ಟುಗಳು (ಪೋಕ್ಸೋ ಕಾಯಿದೆಯಂತಹವು) ಈಗಾಗಲೇ ಪ್ರಬಲವಾಗಿವೆ ಆದರೆ ಅವುಗಳ ಅನುಷ್ಠಾನವು ಸರಿಯಾಗಿ ಆಗುತ್ತಿಲ್ಲ. ಆದ್ದರಿಂದ ಹೊಸ ಕಾನೂನುಗಳನ್ನು ರೂಪಿಸುವುದಕ್ಕಿಂತಲೂ, ಬಲಿಷ್ಠ ಆಡಳಿತ ವ್ಯವಸ್ಥೆ ಮತ್ತು ಶಿಕ್ಷಣ ನೀತಿಯನ್ನು ರೂಪಿಸುವುದು ಹೆಚ್ಚು ನಿರ್ಣಾಯಕ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

### C. ಪ್ರಮುಖ ನಿರ್ವಾಹಕರಿಗೆ ತರಬೇತಿ

- **ಆರೋಗ್ಯ ಕಾರ್ಯಕರ್ತರು:** ಮುಂಚೂಣಿಯಲ್ಲಿರುವ ಕಾರ್ಯಕರ್ತರು (ಉದಾಹರಣೆಗೆ RKSK - ರಾಷ್ಟ್ರೀಯ ಕಿಶೋರ್ ಸ್ವಾಸ್ಥ್ಯ ಕಾರ್ಯಕ್ರಮದ ಅಡಿಯಲ್ಲಿರುವವರು) ಹಲವು ಬಾರಿ ಸಂದರ್ಭೋಚಿತ ತರಬೇತಿಯನ್ನು ಹೊಂದಿರುವುದಿಲ್ಲ. ಇದರಿಂದಾಗಿ ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ (SRH) ಸೇವೆಗಳನ್ನು ಪಡೆಯಲು ಬರುವ ಹದಿಹರೆಯದವರ ಬಗ್ಗೆ ಅವರು ಪೂರ್ವಗ್ರಹ ಪೀಡಿತರಾಗಿ ಅಥವಾ ಟೀಕಾತ್ಮಕವಾಗಿ ನಡೆದುಕೊಳ್ಳುವ ಸಾಧ್ಯತೆಯಿರುತ್ತದೆ.
- **ಕಾನೂನು ವೃತ್ತಿಪರರು:** ವಕೀಲರು ಮತ್ತು ನ್ಯಾಯಾಧೀಶರಿಗೆ "ಘಾತ-ಪ್ರಜ್ಞೆಯ ತರಬೇತಿ" (Trauma-informed training) ನೀಡುವಲ್ಲಿ ಗಮನಾರ್ಹ ಕೊರತೆಯಿದೆ. ಪ್ರಸ್ತುತ ಕಾನೂನು ಶಿಕ್ಷಣವು ಮಕ್ಕಳ ರಕ್ಷಣೆಯ ಹಿಂದಿನ ಮೂಲ ಉದ್ದೇಶವನ್ನು ಅರ್ಥಮಾಡಿಕೊಳ್ಳುವ ಬದಲು, ಕಾನೂನುಗಳನ್ನು ಕೇವಲ ಕಂಠಪಾಠ ಮಾಡುವುದಕ್ಕೆ ಮಾತ್ರ ಸೀಮಿತವಾಗಿದೆ.

# ಅನುಬಂಧ ಸಿ:
## ಪಠ್ಯಕ್ರಮದ ವಿಶ್ಲೇಷಣೆ

ಈ ಅನುಬಂಧವು ಕರ್ನಾಟಕ ರಾಜ್ಯ ಪಠ್ಯಕ್ರಮದ ಪಠ್ಯಪುಸ್ತಕಗಳ (1-10 ನೇ ತರಗತಿಯ ಇಂಗ್ಲಿಷ್, ಪರಿಸರ ಅಧ್ಯಯನ, ವಿಜ್ಞಾನ ಮತ್ತು ಸಮಾಜ ವಿಜ್ಞಾನ) ವಿಶ್ಲೇಷಣೆಯಿಂದ ಕಂಡುಕೊಂಡ ಸಾರಾಂಶವನ್ನು ನೀಡುತ್ತದೆ. ಇದು ಲಿಂಗತ್ವ ಸಮತೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ (CSA) ಗುರುತಿಸುವಿಕೆ ಮತ್ತು ವರದಿ ಮಾಡುವಿಕೆ, ಸಮ್ಮತಿ ಮತ್ತು ಸಂಬಂಧಿತ ಜೈವಿಕ ವಿಷಯಗಳಿಗೆ ಸಂಬಂಧಿಸಿದ ಸಂಶೋಧನೆಗಳನ್ನು ಒಳಗೊಂಡಿದೆ.

## I. ಲಿಂಗತ್ವ ಸಮತೆ

ಪ್ರಾಥಮಿಕ ಹಂತದ ಪರಿಸರ ಅಧ್ಯಯನ (EVS) ಪಠ್ಯಪುಸ್ತಕಗಳಲ್ಲಿ ಲಿಂಗತ್ವ ಸಮತೆಯನ್ನು ಮಧ್ಯಮ ಪ್ರಮಾಣದಲ್ಲಿ ಚರ್ಚಿಸಲಾಗಿದೆ, ಆದರೆ ಇಂಗ್ಲಿಷ್ ಪಠ್ಯಪುಸ್ತಕಗಳಲ್ಲಿ ಇದರ ವ್ಯಾಪ್ತಿಯು ಕನಿಷ್ಠ ಅಥವಾ ಇಲ್ಲವೇ ಇಲ್ಲ ಎಂಬಂತಿದೆ.

### A. ಪ್ರಮುಖ ಅಂಶಗಳು ಮತ್ತು ಯಶಸ್ವಿ ಬದಲಾವಣೆಗಳು

- **ಪ್ರಾಥಮಿಕ ಪರಿಸರ ಅಧ್ಯಯನ (3-5 ನೇ ತರಗತಿ):** ಈ ಪಠ್ಯಪುಸ್ತಕಗಳು ರೂಢಿಗತ ನಂಬಿಕೆಗಳನ್ನು ಸವಾಲು ಮಾಡಲು ಸಕ್ರಿಯವಾಗಿ ಪ್ರಯತ್ನಿಸುತ್ತವೆ. ಉದಾಹರಣೆಗೆ, 3ನೇ ತರಗತಿಯ ಪರಿಸರ ಅಧ್ಯಯನವು ಕುಟುಂಬದ ಸದಸ್ಯರ ನಡುವೆ ಮನೆಗೆಲಸಗಳನ್ನು ಹಂಚಿಕೊಳ್ಳುವುದನ್ನು ಎತ್ತಿ ತೋರಿಸುತ್ತದೆ. 4ನೇ ತರಗತಿಯ ಪರಿಸರ ಅಧ್ಯಯನವು ಹುಡುಗಿಯನ್ನು ಆಟೋ ಚಾಲಕಿಯಾಗಿ ಚಿತ್ರಿಸುವ ಮೂಲಕ ಸಾಂಪ್ರದಾಯಿಕ ಪಾತ್ರಗಳನ್ನು ಯಶಸ್ವಿಯಾಗಿ ಮುರಿಯುತ್ತದೆ.
- **ಪ್ರೌಢ ಹಂತಗಳು (8 ನೇ ತರಗತಿ):** ಈ ಹಂತದ ಸಮಾಜ ವಿಜ್ಞಾನ ಮತ್ತು ಪರಿಸರ ಅಧ್ಯಯನ ಪಠ್ಯಪುಸ್ತಕಗಳು ಹಕ್ಕುಗಳು, ಸಮಾನತೆ ಮತ್ತು ಲಿಂಗತ್ವದ ಸಾಮಾಜಿಕ ಅಂಶಗಳ ಮೇಲೆ ಕೇಂದ್ರೀಕರಿಸುತ್ತವೆ.

### B. ಲೋಪದೋಷಗಳು ಮತ್ತು ಶಿಫಾರಸುಗಳು

- **ಇಂಗ್ಲಿಷ್ ಪಠ್ಯಪುಸ್ತಕಗಳಲ್ಲಿನ ಸಾಂಪ್ರದಾಯಿಕ ಪೂರ್ವಾಗ್ರಹ:** ಪ್ರಾಥಮಿಕ ಹಂತದ ಇಂಗ್ಲಿಷ್ ಪಠ್ಯ ಪುಸ್ತಕಗಳು (1-5 ನೇ ತರಗತಿ) ಅನೇಕ ಬಾರಿ ವೈವಿಧ್ಯಮಯ ಪ್ರಾತಿನಿಧ್ಯವನ್ನು ಹೊಂದಿರುವುದಿಲ್ಲ ಅಥವಾ ಸಾಂಪ್ರದಾಯಿಕ ಲಿಂಗ ಪಾತ್ರಗಳನ್ನೇ ಮುಂದುವರಿಸುತ್ತವೆ.
- **ದೃಶ್ಯಾವಳಿಗಳಿಗಾಗಿ ಶಿಫಾರಸುಗಳು:** ರೂಢಿಗತ ನಂಬಿಕೆಗಳನ್ನು ಮತ್ತಷ್ಟು ಮುರಿಯಲು, ಪುರುಷರು ಮನೆಗೆಲಸಗಳನ್ನು (ಅಡುಗೆ ಮಾಡುವುದು, ಬಟ್ಟೆ ತೊಳೆಯುವುದು ಅಥವಾ ತರಕಾರಿ ಹೆಚ್ಚುವುದು) ಮಾಡುತ್ತಿರುವ ಮತ್ತು ಮಹಿಳೆಯರು ನಾಯಕತ್ವ ಅಥವಾ ಕ್ರೀಡಾ ಪಾತ್ರಗಳಲ್ಲಿ ಇರುವ ಹೆಚ್ಚಿನ ವೈವಿಧ್ಯಮಯ ಉದಾಹರಣೆಗಳನ್ನು ಸೇರಿಸಲು ಮೂಲಗಳು ಸೂಚಿಸುತ್ತವೆ.
- **ಸಮನ್ವಯತೆ:** "ಲಿಂಗತ್ವ ಸಮತೆ" ವಿಷಯವು ಕೇವಲ ಸ್ತ್ರೀ-ಪುರುಷ ಎಂಬ ದ್ವಿಮಾನ ವ್ಯವಸ್ಥೆಗೆ (Binary) ಸೀಮಿತವಾಗದೆ, ಎಲ್ಲಾ ಲಿಂಗ ಗುರುತಿಸುವಿಕೆಗಳನ್ನು ಒಳಗೊಳ್ಳುವಂತೆ (Inclusive) ಇರಬೇಕೆಂದು ಶಿಫಾರಸು ಮಾಡಲಾಗಿದೆ.

## II. ಮಕ್ಕಳ ಸುರಕ್ಷತೆ, ರಕ್ಷಣೆ ಮತ್ತು ಸಮ್ಮತಿ

ಮಕ್ಕಳ ಸುರಕ್ಷತೆಯ ಬಗೆಗಿನ ವಿವರಣೆಗಳು ಪ್ರಾಥಮಿಕ ಹಂತದಲ್ಲಿ ಹೆಚ್ಚಾಗಿ ಕಂಡುಬರುತ್ತವೆ, ಆದರೆ ಇಲ್ಲಿ ದೂರು ನೀಡುವುದು ಮತ್ತು ಕಾನೂನು ಚೌಕಟ್ಟುಗಳ ಕುರಿತಾದ ಆಳವಾದ ಮಾಹಿತಿಯ  ಕೊರತೆಯಿದೆ.

### A. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ (CSA) ಗುರುತಿಸುವಿಕೆ ಮತ್ತು ವರದಿ ಮಾಡುವಿಕೆ

- **ಗುರುತಿಸುವಿಕೆ:** 3 ಮತ್ತು 4 ನೇ ತರಗತಿಯ ಪರಿಸರ ಅಧ್ಯಯನ (EVS) ಪಠ್ಯಪುಸ್ತಕಗಳು "ಒಳ್ಳೆಯ ಸ್ಪರ್ಶ ಮತ್ತು ಕೆಟ್ಟ ಸ್ಪರ್ಶ" (Good Touch and Bad Touch) ವಿಷಯವನ್ನು ಸಾಧಾರಣ ಮಟ್ಟದಲ್ಲಿ ಒಳಗೊಂಡಿವೆ. 5 ನೇ ತರಗತಿಯ ಪರಿಸರ ಅಧ್ಯಯನದ ವೇಳೆಗೆ, ಪಠ್ಯಕ್ರಮವು ಬಟ್ಟೆ ಧರಿಸುವಿಕೆ, ಸ್ಪರ್ಶ ಮತ್ತು ಮಾತನಾಡುವ ನಿಯಮಗಳನ್ನು ಉಲ್ಲೇಖಿಸುವ ಮೂಲಕ ಹೆಚ್ಚು ಸ್ಪಷ್ಟವಾಗುತ್ತದೆ.
- **ವರದಿ ಮಾಡುವಿಕೆ:** 5 ನೇ ತರಗತಿಯ ಪರಿಸರ ಅಧ್ಯಯನದಲ್ಲಿ ವರದಿ ಮಾಡುವ ವ್ಯವಸ್ಥೆಯ ಬಗ್ಗೆ ಕೇವಲ ಕನಿಷ್ಠ ಮಾಹಿತಿ ನೀಡಲಾಗಿದೆ. ಅಸುರಕ್ಷಿತ ನಡವಳಿಕೆಯನ್ನು ಗುರುತಿಸಿದ ನಂತರ ಮಗು ತೆಗೆದುಕೊಳ್ಳಬೇಕಾದ ಕ್ರಮಗಳನ್ನು ಬಲಪಡಿಸುವ ಅಗತ್ಯವಿದೆ ಎಂದು ಗುರುತಿಸಲಾಗಿದೆ.
- **ಗುಪ್ತಾಂಗಗಳ ಹೆಸರುಗಳು:** 4 ಮತ್ತು 5 ನೇ ತರಗತಿಯ ಪರಿಸರ ಅಧ್ಯಯನ ಪಠ್ಯಪುಸ್ತಕಗಳು ವೈಜ್ಞಾನಿಕ ಪರಿಭಾಷೆಯನ್ನು ಬಳಸಿ ಗುಪ್ತಾಂಗಗಳನ್ನು ಹೆಸರಿಸುವುದನ್ನು ಒಳಗೊಂಡಿವೆ. ಆದಾಗ್ಯೂ, ವಿದ್ಯಾರ್ಥಿಗಳ ಉತ್ತಮ ತಿಳುವಳಿಕೆಗಾಗಿ ರೇಖಾಚಿತ್ರಗಳು ಹೆಚ್ಚು ಸ್ಪಷ್ಟವಾಗಿ ಮತ್ತು ಅಂಗರಚನಾಶಾಸ್ತ್ರದ ಪ್ರಕಾರ ನಿಖರವಾಗಿ ಇರಬೇಕೆಂದು ಶಿಫಾರಸು ಮಾಡಲಾಗಿದೆ.

### B. ಕಾನೂನು ಮತ್ತು ಸುರಕ್ಷತಾ ಚೌಕಟ್ಟುಗಳು

- **ಪೋಕ್ಸೋ (POCSO):** 1 ರಿಂದ 10 ನೇ ತರಗತಿಯವರೆಗೆ ವಿಶ್ಲೇಷಿಸಲಾದ ಯಾವುದೇ ಪಠ್ಯಪುಸ್ತಕಗಳಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯಿದೆ (POCSO) ಬಗ್ಗೆ ಉಲ್ಲೇಖವಿಲ್ಲ ಎಂಬುದು ತಿಳಿದುಬಂದಿದೆ.
- **ಸಮ್ಮತಿ (Consent):** ಸಮ್ಮತಿಯ ಪರಿಕಲ್ಪನೆಯು ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಪಠ್ಯಕ್ರಮದಲ್ಲಿ ಬಹುತೇಕ ಗೈರುಹಾಜರಾಗಿದೆ ಅಥವಾ ಸ್ಪಷ್ಟವಾಗಿ ವ್ಯಾಖ್ಯಾನಿಸಲ್ಪಟ್ಟಿಲ್ಲ.
- **ಸುರಕ್ಷತಾ ಕೌಶಲ್ಯಗಳು (Safety Skills):** ಪಠ್ಯದಲ್ಲಿ "ಒಳ್ಳೆಯ/ಕೆಟ್ಟ ಸ್ಪರ್ಶ" (Good/Bad Touch) ಎಂಬ ಪದಗಳನ್ನು ಪರಿಚಯಿಸಲಾಗಿದೆಯಾದರೂ, ಇಂದಿನ ಕಾಲಕ್ಕೆ ಅನುಗುಣವಾಗಿ ಅವುಗಳನ್ನು "ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಶ" (Safe and Unsafe Touch) ಎಂದು ಬದಲಾಯಿಸಬೇಕು ಎಂದು ಮೂಲಗಳು ಶಿಫಾರಸು ಮಾಡುತ್ತವೆ.

## III. ದೈಹಿಕ ಜಾಗೃತಿ ಮತ್ತು ಲೈಂಗಿಕ ಆರೋಗ್ಯ (ವಿಜ್ಞಾನ/ಜೀವಶಾಸ್ತ್ರ)

ಸಂತಾನೋತ್ಪತ್ತಿ ಆರೋಗ್ಯದ ಜೈವಿಕ ಅಂಶಗಳನ್ನು ಪ್ರಾಥಮಿಕವಾಗಿ ಉನ್ನತ ತರಗತಿಗಳಲ್ಲಿ (8 ಮತ್ತು 10 ನೇ ತರಗತಿ) ಚರ್ಚಿಸಲಾಗಿದೆ.

### A. ಹದಿಹರೆಯ ಮತ್ತು ಪ್ರೌಢಾವಸ್ಥೆ (8 ನೇ ತರಗತಿ)

- ವಿಜ್ಞಾನ ಪಠ್ಯಕ್ರಮವು "ಹದಿಹರೆಯಕ್ಕೆ ತಲುಪುವುದು" ಎಂಬ ಅಧ್ಯಾಯವನ್ನು ಒಳಗೊಂಡಿದೆ. ಇದು ಪ್ರೌಢಾವಸ್ಥೆಯ ಬದಲಾವಣೆಗಳು, **ಸಂತಾನೋತ್ಪತ್ತಿ** ಆರೋಗ್ಯ ಮತ್ತು ಮುಟ್ಟಿನ ಕುರಿತಾದ ತಪ್ಪು ಕಲ್ಪನೆಗಳನ್ನು ನಿವಾರಿಸುವ ಬಗ್ಗೆ ಮಾಹಿತಿಯನ್ನು ಒಳಗೊಂಡಿದೆ.
- **ಅಂಗರಚನಾಶಾಸ್ತ್ರದ ಲೋಪದೋಷಗಳು:** 8 ನೇ ತರಗತಿಯ ವಿಜ್ಞಾನದಲ್ಲಿ ಸ್ತ್ರೀ **ಸಂತಾನೋತ್ಪತ್ತಿ** ವ್ಯವಸ್ಥೆಯನ್ನು ಚಿತ್ರಿಸಲಾಗಿದೆಯಾದರೂ, ಚಿತ್ರದಲ್ಲಿ ಯೋನಿಯನ್ನು (Vagina) ಗುರುತಿಸಲಾಗಿಲ್ಲ. ಸಂಪೂರ್ಣ ದೈಹಿಕ ಜಾಗೃತಿಯ ದೃಷ್ಟಿಯಿಂದ ಇದು ಒಂದು ಪ್ರಮುಖ ಲೋಪ ಎಂದು ಗುರುತಿಸಲಾಗಿದೆ.

**B. ಸಂತಾನೋತ್ಪತ್ತಿ  ಮತ್ತು ಸಾರ್ವಜನಿಕ ಆರೋಗ್ಯ (10 ನೇ ತರಗತಿ)**

- 10 ನೇ ತರಗತಿಯ ವಿಜ್ಞಾನ ಪಠ್ಯವು "ಜೀವಿಗಳು ಹೇಗೆ ಸಂತಾನೋತ್ಪತ್ತಿ  ಮಾಡುತ್ತವೆ?" ಎಂಬ ವಿಷಯವನ್ನು ಒಳಗೊಂಡಿದೆ. ಇದು ಮಾನವ ಸಂತಾನೋತ್ಪತ್ತಿನ, ಕುಟುಂಬ ಯೋಜನೆ  ವಿಧಾನಗಳು ಮತ್ತು ಸಂತಾನೋತ್ಪತ್ತಿ ಆರೋಗ್ಯದ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುತ್ತದೆ.
- ಇದು ಹದಿಹರೆಯದ ಮಾತೃತ್ವ ಮತ್ತು ಲಿಂಗ ನಿರ್ಧಾರದಂತಹ ಸಾಮಾಜಿಕ ಮತ್ತು ಆರೋಗ್ಯ ಸಮಸ್ಯೆಗಳನ್ನೂ ಸಹ ಚರ್ಚಿಸುತ್ತದೆ.

## IV. ಸಾಮಾನ್ಯ ಕೊರತೆಗಳು

ವಿಶ್ಲೇಷಿಸಲಾದ ಪಠ್ಯವಿಷಯಗಳಲ್ಲಿ ಈ ವಿಷಯಗಳ ಬಗ್ಗೆ ಮಾಹಿತಿಯ ಕೊರತೆ ಅಥವಾ ಸಂಪೂರ್ಣವಾಗಿ ಈ ವಿಚಾರಗಳನ್ನು ಒಳಗೊಂಡಿಲ್ಲದಿರುವುದು ಕಂಡು ಬಂದಿದೆ:

- **ಪೋಕ್ಸೋ (POCSO) ಕಾಯಿದೆ:** 1 ರಿಂದ 10 ನೇ ತರಗತಿಯ ಪಠ್ಯದಲ್ಲಿ ಸಂಪೂರ್ಣವಾಗಿ ಕಾಣೆಯಾಗಿದೆ.
- **ಸಮ್ಮತಿ (Consent):** ಒಂದು ಪ್ರತ್ಯೇಕ ವಿಷಯವಾಗಲಿ ಅಥವಾ ಪಠ್ಯದ ಭಾಗವಾಗಲಿ ಸಮ್ಮತಿಯ ಬಗ್ಗೆ ಸ್ಪಷ್ಟವಾಗಿ ಬೋಧಿಸುತ್ತಿಲ್ಲ.
- **ಮಾಧ್ಯಮಿಕ ಶಾಲಾ ಹಂತದ ಅಂತರ:** ಪ್ರಾಥಮಿಕ ವರ್ಷಗಳಿಗೆ ಹೋಲಿಸಿದರೆ 6 ಮತ್ತು 7 ನೇ ತರಗತಿಗಳಲ್ಲಿ ವೈಯಕ್ತಿಕ ಸುರಕ್ಷತಾ ಶಿಕ್ಷಣ (PSE) ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯದ (CSA) ವಿಷಯಗಳ ವ್ಯಾಪ್ತಿ ಗಣನೀಯವಾಗಿ ಕಡಿಮೆಯಾಗಿದೆ.
- **ಇಂಗ್ಲಿಷ್ ಪಠ್ಯದಲ್ಲಿ ಸುರಕ್ಷತಾ ಕೌಶಲ್ಯಗಳು:** ಎಲ್ಲಾ ತರಗತಿಗಳ (1–10) ಹೆಚ್ಚಿನ ಇಂಗ್ಲಿಷ್ ಪಠ್ಯಪುಸ್ತಕಗಳು ಸುರಕ್ಷತೆ, ದೌರ್ಜನ್ಯದ ಗುರುತಿಸುವಿಕೆ ಅಥವಾ ವರದಿ ಮಾಡುವಿಕೆಯನ್ನು ಒಳಗೊಂಡಿಲ್ಲ.

# ಅನುಬಂಧ ಡಿ:
## ಇತ್ತೀಚೆಗೆ ಪ್ರಾರಂಭಿಸಲಾದ ಮೌಲ್ಯ ಶಿಕ್ಷಣದ ವಿಷಯಾಧಾರಿತ ಮ್ಯಾಪಿಂಗ್

ಈ ಅನುಬಂಧವು ಹೊಸದಾಗಿ ಪ್ರಾರಂಭಿಸಲಾದ (2025) ಮೌಲ್ಯ ಶಿಕ್ಷಣ ಪಠ್ಯಕ್ರಮದ ವಿಷಯಗಳನ್ನು ನಿರ್ದಿಷ್ಟ ಶೀರ್ಷಿಕೆಗಳ ಅಡಿಯಲ್ಲಿ ಸಂಯೋಜಿಸುತ್ತದೆ: **ಸಮಗ್ರ ಲೈಂಗಿಕ ಶಿಕ್ಷಣ (CSE), ವೈಯಕ್ತಿಕ ಸುರಕ್ಷತಾ ಶಿಕ್ಷಣ (PSE), ಲಿಂಗತ್ವ ಸಮತೆ, ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮ (MHW), ಡಿಜಿಟಲ್ ಪೌರತ್ವ (DC), ಮತ್ತು ಪುನಃಶ್ಚೈತನ್ಯಕಾರಿ ಕ್ರಮಗಳು (RP).**

| ಶೀರ್ಷಿಕೆ | ವ್ಯಾಪ್ತಿಯ ಸ್ಥಿತಿ | ಪಠ್ಯಕ್ರಮದಿಂದ ಪೂರಕ ವಿಷಯಗಳು (6-10 ನೇ ತರಗತಿಗಳು) |
|---|---|---|
| **ವೈಯಕ್ತಿಕ ಸುರಕ್ಷತಾ ಶಿಕ್ಷಣ** | ಮೂಲ ವ್ಯಾಪ್ತಿ | ಪಠ್ಯಕ್ರಮವು "ಲಿಂಗತ್ವವನ್ನು ಅರ್ಥಮಾಡಿಕೊಳ್ಳುವುದು" ಮತ್ತು "ಲಿಂಗಾಧಾರಿತ ಹಿಂಸೆಯನ್ನು ತಡೆಗಟ್ಟುವುದು" ಎಂಬ ವಿಷಯಗಳನ್ನು ಒಳಗೊಂಡಿದೆ. ಇವು ಸಮಗ್ರ ಲೈಂಗಿಕ ಶಿಕ್ಷಣದ (CSE) ಸಾಮಾಜಿಕ ಮತ್ತು ಹಕ್ಕು ಆಧಾರಿತ ಅಂಶಗಳ ಪ್ರಮುಖ ಭಾಗಗಳಾಗಿವೆ. ಆದಾಗ್ಯೂ, ಸಂತಾನೋತ್ಪತ್ತಿಆರೋಗ್ಯ, ಪ್ರೌಢಾವಸ್ಥೆ, ಮಾನಸಿಕ ಅಂಶಗಳು ಮತ್ತು ಸಮ್ಮತಿಗೆ ಸಂಬಂಧಿಸಿದ ನೇರ ವಿಷಯಗಳನ್ನು ಕೇವಲ ಮೂಲ ಹಂತದಲ್ಲಿ ಮಾತ್ರ ಒಳಗೊಳ್ಳಲಾಗಿದೆ. ಅಲ್ಲದೆ, ಈ ವಿಷಯಗಳನ್ನು ಕೇವಲ 8 ನೇ ತರಗತಿಯಿಂದ ಮಾತ್ರ ಪರಿಚಯಿಸಲಾಗಿದೆ. |
| **ವೈಯಕ್ತಿಕ ಸುರಕ್ಷತಾ ಶಿಕ್ಷಣ** | ಒಳಗೊಳ್ಳಲಾಗಿದೆ | ವೈಯಕ್ತಿಕ ಸುರಕ್ಷತೆಯ ಬಗ್ಗೆ ಆಳವಾಗಿ ವಿವರಿಸಲಾಗಿದೆ ಮತ್ತು 6 ನೇ ತರಗತಿಯಿಂದ 10 ನೇ ತರಗತಿಯವರೆಗೆ ಪ್ರತಿ ತರಗತಿಯ ಪಠ್ಯಕ್ರಮದಲ್ಲಿ ಇದನ್ನು ಮರುಕಳಿಸುವ ವಿಷಯವಾಗಿ ಪಟ್ಟಿ ಮಾಡಲಾಗಿದೆ. |
| **ಲಿಂಗತ್ವ ಸಮತೆ** | ಒಳಗೊಳ್ಳಲಾಗಿದೆ | ಈ ಶೀರ್ಷಿಕೆಯನ್ನು "ಲಿಂಗತ್ವ ಸಮಾನತೆ" ಎಂಬ ಮೂಲ ಮೌಲ್ಯದ ಮೂಲಕ ಮತ್ತು "ಲಿಂಗತ್ವವನ್ನು ಅರ್ಥಮಾಡಿಕೊಳ್ಳುವುದು" (6 ಮತ್ತು 8 ನೇ ತರಗತಿ), "ಲಿಂಗತ್ವ ಸಮಾನತೆ" (7 ನೇ ತರಗತಿ), ಹಾಗೂ "ಲಿಂಗಾಧಾರಿತ ಹಿಂಸೆಯನ್ನು ತಡೆಗಟ್ಟುವುದು" (9 ಮತ್ತು 10 ನೇ ತರಗತಿ) ಎಂಬ ನಿರ್ದಿಷ್ಟ ವಿಷಯಗಳ ಮೂಲಕ ಸ್ಪಷ್ಟವಾಗಿ ತಿಳಿಸಲಾಗಿದೆ. |
| **ಮಾನಸಿಕ ಆರೋಗ್ಯ ಮತ್ತು ಯೋಗಕ್ಷೇಮ (MHW)** | ಒಳಗೊಳ್ಳಲಾಗಿದೆ | "ಭಾವನಾತ್ಮಕ ಬುದ್ಧಿವಂತಿಕೆ ಮತ್ತು ಚೇತರಿಸಿಕೊಳ್ಳುವಿಕೆ" ಹಾಗೂ "ಅನುಕಂಪ ಮತ್ತು ಸಹಾನುಭೂತಿ" ಅಡಿಯಲ್ಲಿ ಈ ವಿಷಯವನ್ನು ವಿಸ್ತಾರವಾಗಿ ಒಳಗೊಳ್ಳಲಾಗಿದೆ. ಇದರ ಅಡಿಯಲ್ಲಿ "ಭಾವನಾತ್ಮಕ ನಿಯಂತ್ರಣ", "ಸಕಾರಾತ್ಮಕ ಸ್ವ-ಮಾತು", "ತೀರ್ಪುರಹಿತ ಮನೋಭಾವ", "ಜನರನ್ನು ಅವರಿದ್ದಂತೆಯೇ ಸ್ವೀಕರಿಸುವುದು" ಮತ್ತು "ಕ್ಷಮೆ" ಎಂಬ ನಿರ್ದಿಷ್ಟ ವಿಷಯಗಳನ್ನು ಸೇರಿಸಲಾಗಿದೆ. |
| **ಡಿಜಿಟಲ್ ಪೌರತ್ವ** | ಒಳಗೊಳ್ಳಲಾಗಿದೆ | ಪಠ್ಯಕ್ರಮವು 6 ರಿಂದ 9 ನೇ ತರಗತಿಯವರೆಗೆ "ಡಿಜಿಟಲ್ ಸುರಕ್ಷತೆ" ವಿಷಯವನ್ನು ಒಳಗೊಂಡಿದೆ. 10 ನೇ ತರಗತಿಯಲ್ಲಿ, ಇದು ಡಿಜಿಟಲ್ ಪೌರತ್ವದ ಪ್ರಮುಖ ಸ್ತಂಭವಾದ "ಸೈಬರ್ ಬುಲ್ಲಿಯಿಂಗ್ ಅಥವಾ ಆನ್‌ಲೈನ್ ಕಿರುಕುಳ ತಡೆಗಟ್ಟುವಿಕೆ" (Preventing Cyberbullying) ಕುರಿತು ನಿರ್ದಿಷ್ಟವಾಗಿ ತಿಳಿಸುತ್ತದೆ. |
| **ಪುನಃಶ್ಚೈತನ್ಯಕಾರಿ ಅಭ್ಯಾಸಗಳು** | ಮೂಲ ವ್ಯಾಪ್ತಿ | "ಪುನಃಶ್ಚೈತನ್ಯಕಾರಿ ಅಭ್ಯಾಸಗಳು" ಎಂಬ ಪದವನ್ನು ನೇರವಾಗಿ ಬಳಸದಿದ್ದರೂ, ಅದರ ಮೂಲಭೂತ ಮೌಲ್ಯಗಳನ್ನು "ತಪ್ಪುಗಳನ್ನು ಒಪ್ಪಿಕೊಳ್ಳುವ ಧೈರ್ಯ", "ಹೊಣೆಗಾರಿಕೆ", "ಕ್ಷಮೆ" ಮತ್ತು "ತರಗತಿ ಒಪ್ಪಂದ" (ಎಲ್ಲಾ ತರಗತಿಗಳಿಗೂ ಪಟ್ಟಿ ಮಾಡಲಾಗಿದೆ) ಅಂತಹ ವಿಷಯಗಳ ಮೂಲಕ ಅಳವಡಿಸಲಾಗಿದೆ. ಇವು ಉಂಟಾದ ಹಾನಿಯನ್ನು ಸರಿಪಡಿಸುವುದು ಮತ್ತು ಸಮುದಾಯ ನಿರ್ಮಾಣದ ಮೇಲೆ ಗಮನ ಕೇಂದ್ರೀಕರಿಸುತ್ತವೆ. |

**ಎನ್‌ಫೋಲ್ಡ್ ಸಂಸ್ಥೆಯನ್ನು** 2001ರಲ್ಲಿ (2002ರಲ್ಲಿ ಟ್ರಸ್ಟ್ ಆಗಿ ನೋಂದಾಯಿಸಲಾಗಿದೆ) ಇಬ್ಬರು ಸ್ತ್ರೀರೋಗ ತಜ್ಞರಾದ ಡಾ. ಶೈಬ್ಯಾ ಸಲ್ಡಾನ್ಹಾ ಮತ್ತು ಡಾ. ಸಂಗೀತಾ ಸಾಕ್ಸೇನಾ ಅವರು ಭಾರತದಲ್ಲಿ ಲೈಂಗಿಕತೆ ಕುರಿತು ಸಂವಾದದ ಕೊರತೆ, ಲಿಂಗಾಧಾರಿತ ಹಿಂಸಾಚಾರ ಮತ್ತು ಮಕ್ಕಳ ಲೈಂಗಿಕ ದೌರ್ಜನ್ಯದ ಸುತ್ತಲಿನ ಮೌನ ಮತ್ತು ನಿರ್ಲಕ್ಷ್ಯದ ಹಿನ್ನೆಲೆಯಲ್ಲಿಆರಂಭಿಸಿದರು.
ಎನ್‌ಫೋಲ್ಡ್ ಸಂಸ್ಥೆ ಮಕ್ಕಳು ಮೌಲ್ಯಯುತರೆಂದು ಭಾವಿಸುವ, ಅವರ ಹಕ್ಕುಗಳನ್ನು ಗೌರವಿಸುವ ಸುರಕ್ಷಿತ ವಾತಾವರಣಗಳನ್ನು ನಿರ್ಮಿಸುವುದಕ್ಕಾಗಿ ಕೆಲಸ ಮಾಡುತ್ತದೆ. ಜೊತೆಗೆ, ಎಲ್ಲಾ ಲಿಂಗಗಳ ಜನರು ಸಬಲರಾಗುವಂತೆ, ಜವಾಬ್ದಾರಿಯುತ ಮತ್ತು ಹೊಣೆಗಾರರಾಗುವಂತೆ ಪ್ರೇರೇಪಿಸುವುದು ಇದರ ಉದ್ದೇಶವಾಗಿದೆ.
ಈ ಕಾರ್ಯವನ್ನು ಎನ್‌ಫೋಲ್ಡ್ ವಿಭಿನ್ನ ಕ್ಷೇತ್ರಗಳಲ್ಲಿ ನೆಲಮಟ್ಟದ ಕಾರ್ಯಚಟುವಟಿಕೆಗಳ ಮೂಲಕ, ಯುನಿಸೆಫ್ (UNICEF), ಯುನೆಸ್ಕೋ (UNESCO), ಹಾಗೂ ರಾಜ್ಯ ಸರ್ಕಾರಗಳಂತಹ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳ ಜೊತೆಗೆ ಸಹಕಾರದ ಮೂಲಕ, ಮತ್ತು ನೀತಿ ವಕಾಲತ್ತಿನ ಮೂಲಕ ಸಾಧಿಸುತ್ತಿದೆ.

- **ಪ್ರಿವೆನ್ಷನ್ ಮತ್ತು ಸುವಿಧಾ ಪ್ರಾಜೆಕ್ಟ್ ತಂಡ** (Prevention and Suvidha Project Team): ಈ ತಂಡವು ಲಿಂಗತ್ವ ಸಮತೆ, ಲೈಂಗಿಕತೆ ಮತ್ತು ವೈಯಕ್ತಿಕ ಸುರಕ್ಷತೆಯ ಶಿಕ್ಷಣವನ್ನು ನೀಡುವಲ್ಲಿ ಮುಂಚೂಣಿಯಲ್ಲಿದೆ. ಇದು ವಿಕಲಚೇತನ ಮಕ್ಕಳು ಸೇರಿದಂತೆ ಸಾಮಾನ್ಯ ಮಕ್ಕಳಿಗೆ, ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಪೋಷಕರು, ಶಿಕ್ಷಕರು ಹಾಗೂ ಲಿಂಗಾಧಾರಿತ ಮತ್ತು ಲೈಂಗಿಕ ದೌರ್ಜನ್ಯದ ಸಂತ್ರಸ್ತರಿಗೆ (victims) ಮತ್ತು ಅಪರಾಧಿಗಳಿಗೆ ಸೇವೆ ಸಲ್ಲಿಸುವ ಮಧ್ಯಸ್ಥಗಾರರಿಗೆ ತರಬೇತಿ ನೀಡುತ್ತದೆ.

- **ಬೆಂಬಲ ಮತ್ತು ಪುನರ್ವಸತಿ ತಂಡ** (Support and Rehabilitation Team): ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಕ್ಕಳಿಗೆ ಕ್ರಿಮಿನಲ್ ನ್ಯಾಯಾಂಗ ವ್ಯವಸ್ಥೆಯ ಮೂಲಕ ಈ ತಂಡವು ಸಹಾಯ ಮಾಡುತ್ತದೆ. ಅಲ್ಲದೆ, ಪೋಕ್ಸೊ (POCSO) ಕಾಯ್ದೆ, ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳ ಮತ್ತು ಕುಂದುಕೊರತೆ ನಿವಾರಣಾ ಕಾರ್ಯವಿಧಾನಗಳ ಬಗ್ಗೆ ತರಬೇತಿಯನ್ನು ನೀಡುತ್ತದೆ.

- **ಪುನಃಶ್ಚೈತನ್ಯಕಾರಿ  ಅಭ್ಯಾಸಗಳ ತಂಡ** (Restorative Practices Team): ಈ ತಂಡವು 'ಸಂವಾದ ವಲಯಗಳನ್ನು' (Circles) ಆಯೋಜಿಸುತ್ತದೆ ಮತ್ತು ಮಕ್ಕಳ ಪಾಲನಾ ಸಂಸ್ಥೆಗಳ ಸಿಬ್ಬಂದಿ, ಶಾಲಾ ಶಿಕ್ಷಕರು, ಆಪ್ತ ಸಮಾಲೋಚಕರು ಮತ್ತು ಸಮಾಜ ಸೇವಕರಿಗೆ ಪುನಃಶ್ಚೈತನ್ಯಕಾರಿ ಸಂಸ್ಕೃತಿಯನ್ನು (Restorative Culture) ನಿರ್ಮಿಸಲು ಹಾಗೂ ಸಂಘರ್ಷಗಳನ್ನು ಪರಿಹರಿಸಲು ತರಬೇತಿ ನೀಡುತ್ತದೆ.

- **ಸಂಶೋಧನಾ ತಂಡ** (Research Team): ಈ ತಂಡವು ಮಕ್ಕಳ ಹಕ್ಕುಗಳನ್ನು ಉತ್ತೇಜಿಸಲು ಮತ್ತು ಕಾನೂನುಗಳ ಅನುಷ್ಠಾನಕ್ಕಾಗಿ ಮಕ್ಕಳ ರಕ್ಷಣೆಗೆ ಸಂಬಂಧಿಸಿದ ವಿಷಯಗಳ ಕುರಿತು ಸಂಶೋಧನೆ ನಡೆಸುತ್ತದೆ.

---

**ಮಾರ್ಚ್ 2025ರ ವರೆಗೆ ತಲುಪಿದ ಸಂಖ್ಯೆ ಮಾರ್ಚ್ 2025 ರ ಹೊತ್ತಿಗೆ, ಎನ್‌ಫೋಲ್ಡ್ (Enfold) ಸಂಸ್ಥೆಯು ಭಾರತದ 60 ಕ್ಕೂ ಹೆಚ್ಚು ನಗರಗಳು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಈ ಕೆಳಗಿನ ಜನಸಮೂಹವನ್ನು ತಲುಪಿ ಜಾಗೃತಿ ಮೂಡಿಸಿದೆ:**
1,078 ಶಾಲೆಗಳು, ಕಾಲೇಜುಗಳು ಮತ್ತು ಮಕ್ಕಳ ಪಾಲನಾ ಸಂಸ್ಥೆಗಳ 2,57,682 ಕ್ಕೂ ಹೆಚ್ಚು ಮಕ್ಕಳು ಮತ್ತು ಹದಿಹರೆಯದವರು . 90,502 ಪೋಷಕರು, ಶಿಕ್ಷಕರು ಮತ್ತು ಪೂರಕ ಸಿಬ್ಬಂದಿ. 18,431 ಪೊಲೀಸ್ ಅಧಿಕಾರಿಗಳು, ವೈದ್ಯರು ಮತ್ತು ನ್ಯಾಯಾಂಗ ಸಿಬ್ಬಂದಿ. 3,272 ಸರ್ಕಾರಿ ಅಧಿಕಾರಿಗಳು, ಬಾಲಾಪರಾಧ ನ್ಯಾಯ ಮಂಡಳಿ (JJB) ಸದಸ್ಯರು ಮತ್ತು ಮಕ್ಕಳ ಪಾಲನಾ ಸಂಸ್ಥೆಯ ಸಿಬ್ಬಂದಿ. 15,453 ಸಾಮಾಜಿಕ ಕಾರ್ಯಕರ್ತರು ಮತ್ತು ಆಪ್ತ ಸಮಾಲೋಚಕರು.

enfold

**ಎನ್‌ಫೋಲ್ಡ್ ಪ್ರೊಆಕ್ಟಿವ್ ಹೆಲ್ತ್ ಟ್ರಸ್ಟ್**
ಸಂಖ್ಯೆ 42, 3ನೇ ಮುಖ್ಯರಸ್ತೆ,
1ನೇ ಅಡ್ಡರಸ್ತೆ, ದೊಮ್ಮಲೂರು 2ನೇ ಹಂತ,
ಬೆಂಗಳೂರು - 560071, ಭಾರತ.
ದೂರವಾಣಿ: +91 99000 94251
ಇಮೇಲ್: info@enfoldindia.org